## ಅಧ್ಯಾಯ 4

# ದೇವರ ಸಿಂಹಾಸನ ಕೋಣೆ

### ದೇವರ ಸಿಂಹಾಸನ (4:1-5)

**[1]ಇವುಗಳಾದ ಮೇಲೆ ನಾನು ನೋಡಿದಾಗ ಪರಲೋಕದಲ್ಲಿ ತೆರೆದಿದ್ದ ಬಾಗಿಲು ಕಾಣಿಸಿತು; ಮತ್ತು ನನ್ನ ಸಂಗಡ ತುತೂರಿಯು ಮಾತಾಡುತ್ತದೋ ಎಂಬಂತೆ ನಾನು ಮೊದಲು ಕೇಳಿದ್ದ ವಾಣಿಯು ಕೇಳಿಸಿತು. ಇಲ್ಲಿಗೆ ಏರಿ ಬಾ, ಮುಂದೆ ಆಗಬೇಕಾದವುಗಳನ್ನು ನಿನಗೆ ತೋರಿಸುವೆನು ಎಂದು ಹೇಳಿತು. [2]ಕೂಡಲೆ ದೇವರಾತ್ಮವಶನಾದೆನು. ಆಗ ಇಗೋ, ಪರಲೋಕದಲ್ಲಿ ಒಂದು ಸಿಂಹಾಸನವಿತ್ತು; ಸಿಂಹಾಸನದ ಮೇಲೆ ಒಬ್ಬನು ಕೂತಿದ್ದನು. [3]ಕೂತಿದ್ದವನು ಕಣ್ಣಿಗೆ ಸೂರ್ಯಕಾಂತ ಪದ್ಮರಾಗ ಮಣಿಗಳಂತೆ ಕಾಣುತ್ತಿದ್ದನು. ಸಿಂಹಾಸನದ ಸುತ್ತಲು ಪಚ್ಚೆಯಂತೆ ತೋರುತ್ತಿದ್ದ ಮುಗಿಲುಬಿಲ್ಲು ಇತ್ತು. [4]ಇದಲ್ಲದೆ ಸಿಂಹಾಸನದ ಸುತ್ತಲು ಇಪ್ಪತ್ತುನಾಲ್ಕು ಸಿಂಹಾಸನಗಳಿದ್ದವು; ಆ ಸಿಂಹಾಸನಗಳ ಮೇಲೆ ಶುಭ್ರವಸ್ತ್ರ ಧರಿಸಿಕೊಂಡಿದ್ದ ಇಪ್ಪತ್ತುನಾಲ್ಕು ಮಂದಿ ಹಿರಿಯರು ಕೂತಿದ್ದರು; ಅವರ ತಲೆಗಳ ಮೇಲೆ ಚಿನ್ನದ ಕಿರೀಟಗಳಿದ್ದವು. [5]ಸಿಂಹಾಸನದೊಳಗಿಂದ ಮಿಂಚುಗಳೂ ವಾಣಿಗಳೂ ಗುಡುಗುಗಳೂ ಹೊರಡುತ್ತವೆ. ಅದರ ಮುಂದೆ ದೇವರ ಏಳು ಆತ್ಮಗಳನ್ನು ಸೂಚಿಸುವ ಏಳು ದೀಪಗಳು ಉರಿಯುತ್ತಿದ್ದವು.**

ಏಳು ಸಭೆಗಳಿಗೆ ಬರೆದ ಪತ್ರಗಳಲ್ಲಿ ಕ್ರೈಸ್ತರು ಗತಕಾಲದಲ್ಲಿ ಹಿಂಸಿಸಲ್ಪಟ್ಟಿದ್ದರು (2:13; 3:8), ವರ್ತಮಾನಕಾಲದಲ್ಲಿ ಹಿಂಸಿಸಲ್ಪಡುತ್ತಿದ್ದರು (2:9; 3:9), ಮತ್ತು ಭವಿಷ್ಯದಲ್ಲಿ ಇನ್ನೂ ಅಧಿಕವಾಗಿ ಹಿಂಸಿಸಲ್ಪಡಲಿದ್ದರು (2:10; 3:10). ಈ ಕ್ರೈಸ್ತರಿಗೆ ಕಾದಿದ್ದ ಬಹಳಷ್ಟು ಸಂಕಷ್ಟಗಳನ್ನು 6 ಮತ್ತು ನಂತರದ ಅಧ್ಯಾಯಗಳಲ್ಲಿ ಸಂಕ್ಷಿಪ್ತವಾಗಿ ವಿವರಿಸಲ್ಪಟ್ಟಿರುತ್ತವೆ. ಹೇಗೂ, ಯೇಸುವು ಭವಿಷ್ಯದಲ್ಲಿ ಸಂಭವಿಸಲಿದ್ದ ಸಮಸ್ಯೆಗಳನ್ನು ಬಯಲುಗೊಳಿಸುವ ಮುನ್ನ, ಆತನು ಎಲ್ಲವನ್ನೂ ಕುರಿತ ಒಂದು ದೃಷ್ಟಿಕೋನವನ್ನು 4 ಮತ್ತು 5 ಅಧ್ಯಾಯಗಳಲ್ಲಿ ಒದಗಿಸುತ್ತಾನೆ. ಪ್ರಕಟನೆ ಪುಸ್ತಕರ ಮುಖ್ಯ ಅಧ್ಯಾಯಗಳ ಮುಖಾಂತರವಾಗಿ, ಕಣ್ಣಿಗೆ ಗೋಚರವಾಗುತ್ತಿರುವದಕ್ಕೆ ತದ್ವಿರುದ್ಧವಾಗಿ, ದೇವರು ಈಗಲೂ ತನ್ನ ಸಿಂಹಾಸನದಲ್ಲಿಯೇ ಇದ್ದಾನೆ ಮತ್ತು, ರೋಮನ್ ಸಾಮ್ರಾಜ್ಯವಲ್ಲ, ಆದರೆ ಆತನೇ ಅಧಿಕಾರದಲ್ಲಿದ್ದಾನೆ ಎಂಬದನ್ನು ಹಿಂಸೆಯನ್ನನುಭವಿಸುತ್ತಿದ್ದ ಕ್ರೈಸ್ತರಿಗೆ ತೋರಿಸಿ ಕೊಡಲಾಗುತ್ತದೆ. ಅಷ್ಟುಮಾತ್ರವಲ್ಲದೆ, ದೇವರು ತನ್ನ ಯೋಜನೆಗಳನ್ನು ಮತ್ತು ಉದ್ದೇಶಗಳನ್ನು ಹೊಂದಿದ್ದನು ಮತ್ತು ಅಂತಿಮವಾಗಿ ಎಲ್ಲಾ ಕಾರ್ಯಗಳನ್ನು ತನ್ನ ಚಿತ್ತಕ್ಕನುಗುಣವಾಗಿ ಕಾರ್ಯಸಾಧಿಸುವನು ಎಂಬ ಭರವಸವನ್ನು ಅವರಿಗೆ ಕೊಡಲಾಯಿತು. 4 ಮತ್ತು 5 ಅಧ್ಯಾಯಗಳು ನಮ್ಮನ್ನು ದೇವರ ಪ್ರಸನ್ನತೆಯೊಳಗೆ ಕರೆದೊಯ್ಯುತ್ತವೆ. ಈ ಭಯಭಕ್ತಿಯೊಂದಿಗೆ ನಾವು ನಮ್ಮ ಜೀವಿತಗಳನ್ನು ಕುರಿತು ಹೇಗೆ ಸರಿಯಾದ ದೃಷ್ಟಿಕೋನ ಹೊಂದಿರಬೇಕೆಂಬುದನ್ನು ತಿಳಿಯುವವರಾಗುವಂತೆ ಈ ವಾಕ್ಯಭಾಗವನ್ನು ಅರ್ಥೈಸಬೇಕಾಗಿರುತ್ತದೆ.

ನಾವು ಮೊದಲು 4ನೇ ಅಧ್ಯಾಯದಲ್ಲಿನ ದರ್ಶನವನ್ನು ಪೂರ್ತಿಯಾಗಿ ಪರೀಕ್ಷಿಸಲಿದ್ದೇವೆ. ಅದರಲ್ಲಿರುವ ವಿವರಗಳಿಂದ ಚಿಂತಿತರಾಗದಿರಿ. ಇಪ್ಪತ್ತುನಾಲ್ಕು ಹಿರಿಯರು ಯಾರೆಂದು ಗುರುತಿಸುವ ವಿಷಯದಲ್ಲಿ, ಗಾಜಿನ ಸಮುದ್ರ ಎಂದರೇನು, ಮತ್ತು ನಾಲ್ಕು ಮೃಗಗಳ ಅರ್ಥ ಹಾಗೂ ಉದ್ದೇಶವೇನು ಎಂಬುದನ್ನು ಗುರುತಿಸುವದಕ್ಕೆ ವ್ಯಾಖ್ಯಾನಕಾರರು ಕಷ್ಟಪಡುತ್ತಾರೆ; ಆದರೆ ಆ ನಿರ್ದಿಷ್ಟವಾದ ಸಂಗತಿಗಳ ಮೇಲೆಯೇ ಮುಖ್ಯ ಒತ್ತು ಕೊಡುವದೆಂದರೆ ನಿಜವಾದ ಅಂಶವನ್ನು ತಪ್ಪಿಸಿಕೊಳ್ಳುವದು ಎಂದಾಗುತ್ತದೆ. ಈ ದೃಶ್ಯದ ಉದ್ದೇಶವು ಕಣ್ಣುಗಳನ್ನು ಕೋರೈಸುವಂತೆ ಮಾಡುವದು ಮತ್ತು ಕಲ್ಪನಾಶಕ್ತಿಯನ್ನು ದಿಗ್ಭ್ರಮೆಗೊಳಿಸುವದು ಆಗಿತ್ತು. ದೇವರ ಶೋಭಾಯಮಾನತೆ ಕುರಿತು ನಾವು ಅತ್ಯಾಶ್ಚರ್ಯ ಪಡುವಂತೆ ಮಾಡುವದಕ್ಕಾಗಿ ಅದು ಸಂರಕ್ಷಿಸಲ್ಪಟ್ಟಿರುತ್ತದೆ. ನಾವು ಕ್ರಮೇಣದಲ್ಲಿ ಸಂಕೇತಗಳ ಮಹತ್ವಪೂರ್ಣತೆಯ ವಿಷಯದಲ್ಲಿ ಹೋರಾಟ ಮಾಡಲಿದ್ದೇವೆ, ಆದರೆ ಮೊದಲನೆಯದಾಗಿ ಯೋಹಾನನು ಅನುಭವ ಮಾಡಿದ ಪ್ರಕಾರವಾಗಿ ದರ್ಶನವನ್ನು ಅನುಭವಿಸುವದಕ್ಕೆ ಪ್ರಯತ್ನಿಸುವ ಮೂಲಕ ಅದನ್ನು ಅರ್ಥೈಸಬೇಕಾಗಿರುತ್ತದೆ. ಅದು ಆತನ ಮೇಲೆ ಈ ರೀತಿಯಾಗಿ ಪರಿಣಾಮ ಬೀರಿರಬಹುದಾಗಿದೆ:

ದರ್ಶನದ ಮಹಿಮೆ ಹಾಗೂ ವೈಭವವು ಯೋಹಾನನಿಗೆ ಊಹಿಸಿಕೊಳ್ಳುವದಕ್ಕೆ ಸಾಧ್ಯವಾಗುವ ಯಾವದೇ ಕಲ್ಪನೆಯನ್ನು ಮೀರಿದ್ದಾಗಿತ್ತು. ಅಲ್ಲಿನ ಪ್ರಕಾಶಮಾನತೆಯಿಂದ ಅರೆ-ಕುರುಡನಾದನು ಮತ್ತು ಅಮೋಘ ದೃಶ್ಯದಿಂದ ಕಳವಳಗೊಂಡವನಾಗಿ, ಆತನು ತನ್ನ ಮುಂದಿರುವ ದೃಶ್ಯವು ಏನೆಂಬುದನ್ನು ಅರ್ಥೈಸಿಕೊಳ್ಳುವದಕ್ಕೆ ಪ್ರಯಾಸ ಪಟ್ಟನು. ದೃಶ್ಯದ ಮಧ್ಯ ಭಾಗದಲ್ಲಿ ಒಂದು ಬೃಹತ್ ಸಿಂಹಾಸನವಿತ್ತು, ಅದು ಸರ್ವಶಕ್ತನ ಅಗ್ರಪೀಠವಾಗಿತ್ತು. ಆ ಸಿಂಹಾಸನದೊಳಗಿಂದ ಕಣ್ಣು ಕೋರೈಸುವಂತಹ ಬಣ್ಣದ ಮುಗಿಲುಬಿಲ್ಲು ಲಯಬದ್ಧವಾಗಿ ಹಿಗ್ಗುತ್ತಿತ್ತು ಮತ್ತು ಕುಗ್ಗುತ್ತಿತ್ತು. ಆ ಸಿಂಹಾಸನದ ಸುತ್ತಲು ಅದಕ್ಕಿಂತ ಚಿಕ್ಕದಾದ ಸಿಂಹಾಸನಗಳ ಸಾಲುಗಳ ವೃತ್ತವಿತ್ತು. ಆ ಸಿಂಹಾಸನಗಳ ಮೇಲೆ ಶುಭ್ರವಸ್ತ್ರಗಳನ್ನು ಮತ್ತು ಚಿನ್ನದ ಕಿರೀಟಗಳನ್ನು ಧರಿಸಿಕೊಂಡು ವೃದ್ಧರು ಕೂತಿದ್ದರು, ಅವರ ಒರಟಾದ ಮುಖಗಳು ಪರಲೋಕದ ಹೊಳಪಿನಿಂದ ಮುಳುಗಿ ಹೋಗಿದ್ದವು.

ಯಾವದೇ ಮುನ್ನೆಚ್ಚರಿಕೆಯನ್ನು ಕೊಡದೆ, ಸಿಂಹಾಸನದೊಳಗಿಂದ ಒಂದು ಭೀತಿ ಹುಟ್ಟಿಸುವಂತಹ ಗುಡುಗುವ ಆಕಾಶವಾಣಿ ಮತ್ತು ಚೂಪಾದ ಮಿಂಚಿನ ಬೆಳಕುಗಳು ಹೊರಡುತ್ತಿದ್ದವು. ಬಳಿಕ ಸಿಂಹಾಸನದ ಕೆಳಭಾಗದಲ್ಲಿ ಏಳು ದೀಪಗಳು ಉರಿಯುತ್ತಿದ್ದವು, ಅದು ಯೋಹಾನನನ್ನು ಬೆಚ್ಚಿಬೀಳಿಸಿತ್ತು. ಆತನ ಮತ್ತು ಯಥಾವತ್ತಾಗಿದ್ದ ಶಕ್ತಿ ನಡುವೆ ಒಂದು ವ್ಯಾಪಕವಾದ ಹೊಳೆಯುವ ವಿಸ್ತಾರ ಪ್ರದೇಶವಿತ್ತು - ಮತ್ತು ಯೋಹಾನನು ದೂರದಲ್ಲಿರುವದಕ್ಕೆ ಸಂತೋಷ ಪಟ್ಟಿದ್ದನು. ಆತನ ಹೃದಯವು ಎದೆಯೊಳಗಿಂದ ಸ್ಫೋಟಗೊಂಡು ಬಂದು ಬಿಡುವದೋ ಎನ್ನುವಷ್ಟರ ಮಟ್ಟಿಗೆ ಅವನ ಹೃದಯವು ಬಡಿದುಕೊಳ್ಳುತ್ತಿತ್ತು. ಯೋಹಾನನ ಕಣ್ಣುಗಳು ಸುಧಾರಿಸಿಕೊಂಡು ನೋಡಿದಾಗ, ಆತನ ನೋಟವು ಸಿಂಹಾಸನದ ಸುತ್ತಲು ಇದ್ದ ತೀಕ್ಷ್ಣ ಪ್ರಕಾಶವನ್ನು ಸೀಳಿಕೊಂಡು ಹೋಗಲು ಶಕ್ತವಾಗಿತ್ತು, ಮತ್ತು ನಾಲ್ಕು ವಿಲಕ್ಷಣವಾದ ಮೃಗಗಳನ್ನು ಕಂಡನು. ಅವುಗಳ ಆಕಾರವು ಸುಂದರ ಮತ್ತು ವಿಕಾರ ಎರಡೂ ಆಗಿತ್ತು. ಎಲ್ಲವುಗಳಿಗೂ ರೆಕ್ಕೆಗಳಿದ್ದವು ಮತ್ತು ಕಣ್ಣುಗಳಿಂದ ಆವರಿಸಲ್ಪಟ್ಟಿದ್ದವು - ಮಿಟುಕಿಸದ, ಎಲ್ಲವನ್ನೂ ನೋಡುವ ಕಣ್ಣುಗಳು. ಅವುಗಳು ವಿಶ್ವದಲ್ಲಿಯೇ ಅತ್ಯಂಥ ಧೈರ್ಯಶಾಲಿ, ಬಲಿಷ್ಠ, ಮತ್ತು ವೇಗವಾದವುಗಳು ಎಂಬುದನ್ನು ಯೋಹಾನನು ಪವಿತ್ರಾತ್ಮನ ಮೂಲಕ ಅರಿತುಕೊಂಡಿದ್ದನು. ಅನಂತರದಲ್ಲಿ ಅವರ ಹಾಡಿನ ಕುರಿತು

ಅಪೊಸ್ತಲರನು ಎಚ್ಚರಗೊಳ್ಳುತ್ತಾನೆ. ಅವರು ಸಿಂಹಾಸನದ ಮೇಲೆ ಕೂತಿದ್ದಾತನನ್ನು ಸ್ತುತಿಸುತ್ತಿರುವ ವೇಳೆ, ಅವರ ಹಾಡು ಅಪೊಸ್ತಲನ ಆತ್ಮವನ್ನು ತುಂಬಿಕೊಂಡಿತ್ತು: "ದೇವರಾದ ಕರ್ತನು ಪರಿಶುದ್ಧನು ಪರಿಶುದ್ಧನು ಪರಿಶುದ್ಧನು; ಆತನು ಸರ್ವಶಕ್ತನು, ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿ ಇರುವಂಥವನು." ಯೋಹಾನನು ಭಯದಿಂದ ಆವರಿಸಲ್ಪಟ್ಟನು.

ಈ ದರ್ಶನವು ಒಟ್ಟಾರೆಯಾಗಿ ಯಾವ ಪ್ರಭಾವವನ್ನು ಯೋಹಾನನ ಮೇಲೆ ಬೀರಿರಬಹುದಾಗಿದೆ? ಬಹುಶಃ ಆತನ ಮನಸ್ಸನ್ನು "ಮಹಿಮೆ," "ಅಮೋಘ," "ವೈಭವ," "ಶಕ್ತಿ," ಮತ್ತು "ಪರಾಕ್ರಮ" ಎಂಬ ಶಬ್ದಗಳು ತುಂಬಿಕೊಂಡವು. ಆತನಿಗೆ ಮತ್ತು ನಮಗಾಗಿ, ಈ ದರ್ಶನದ ಪ್ರಾಥಮಿಕ ಉದ್ದೇಶವು ಪ್ರತಿಯೊಬ್ಬ ವ್ಯಕ್ತಿಯ ಮನಸ್ಸು ಮತ್ತು ಹೃದಯದ ಮೇಲೆ ದೇವರ ಹಿರಿಮಯೆ ಒಂದು ಛಾಪು ಮೂಡಿಸುವದೇ ಆಗಿರುತ್ತದೆ. ಅದರಲ್ಲಿನ ವಿವರಗಳು ತಮ್ಮ ಕಡೆಗೆ ಗಮನವನ್ನು ಸೆಳೆದುಕೊಳ್ಳುವ ಉದ್ದೇಶದಿಂದ ಕೊಡಲ್ಪಟ್ಟಿರುವದಿಲ್ಲ, ಆದರೆ ಆ ಭಾವನೆಯನ್ನು ವಿವರಿಸುವದಕ್ಕೆ ಕೊಡಲ್ಪಟ್ಟಿರುತ್ತವೆ.

ಈ ದರ್ಶನವು ಯೋಹಾನನ ಮೇಲೆ ಕಾರ್ಯರೂಪದ ಯಾವ ಪರಿಣಾಮವನ್ನು ಬೀರಿತ್ತು? ಯೋಹಾನನು ದೇವರ ಮಹಿಮೆ ಮತ್ತು ಶಕ್ತಿಯನ್ನು ನೋಡಿದ ಬಳಿಕ, ಆತನು ಖಂಡಿತವಾಗಿಯೂ ರೋಮನ್ ಸಾಮ್ರಾಜ್ಯದ ಪರಾಕ್ರಮದ ಕುರಿತು ಇನ್ನೆಂದಿಗೂ ಮೊದಲಿನ ರೀತಿಯಲ್ಲಿ ಕಾಣುವದಕ್ಕೆ ಸಾಧ್ಯವಿರಲಿಲ್ಲ. ದೇವರ ಸಿಂಹಾಸನದೊಂದಿಗೆ ಹೋಲಿಸುವದಾದರೆ, Domitianನ ಸಿಂಹಾಸನವು ಕೇವಲ ಕಸದ ರಾಶಿಯಲ್ಲಿರುವದಕ್ಕೆ ಯೋಗ್ಯವಾಗಿದ್ದ ಕೀಲುಗಳೆಲ್ಲಾ ಸಡಿಲುಗೊಂಡು ಅಲ್ಲಾಡುತ್ತಿರುವ ಪೀಠದಂತಿತ್ತು. ದೇವರ ಮಹಿಮೆಯ ಪಕ್ಕದಲ್ಲಿಡುವದಾದರೆ, ರೋಮನ್ ಸಾಮ್ರಾಜ್ಯದ ವೈಭವವು ನವುರು ಹಾಗೂ ಚಮಕಿ ಹಾಕಿದ ಬಟ್ಟೆಯಂತಿತ್ತು. ದೇವರ ಶಕ್ತಿಯ ವಿರುದ್ಧ ಹೋಲಿಸಿದರೆ, ರೋಮನ್ ಸೈನ್ಯವು ನವಜಾತ ಕೂಸಿನಂತೆ ಅಸಹಾಯಕವಾಗಿತ್ತು. ನಾವು ಒಂದೊಂದು ವಚನದಂತೆ ಅಧ್ಯಾಯವನ್ನು ಅಧ್ಯಯನ ಮಾಡುತ್ತಿರುವ ವೇಳೆ ಈ ಒಟ್ಟಾರೆಯಾದ ಅನಿಸಿಕೆಯನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ.

**ವಚನ 1.** ಭೂಮಿಯ ಮೇಲೆ, ದುಷ್ಟತನವು ಲಂಗುಲಗಾಮುವಿಲ್ಲದ್ದಾಗಿತ್ತು ಮತ್ತು ಸರ್ವಶಕ್ತಿಯುಳ್ಳದ್ದೆಂಬಂತೆ ಕಂಡಿತ್ತು. ಒಳ್ಳೇತನವು ಹತಾಶೆಗೊಂಡಿತ್ತು ಮತ್ತು ದುರ್ಬಲ ಹಾಗೂ ಗಾಯಗೊಳ್ಳಬಲ್ಲದ್ದಾಗಿ ತೋರುತ್ತಿತ್ತು. ಆ ದೃಷ್ಟಿಕೋನವನ್ನು ಸರಿಪಡಿಸುವದಕ್ಕಾಗಿ, ಯೋಹಾನನು ಮೇಲಕ್ಕೆ ನೋಡಬೇಕಾಗಿತ್ತು.

> ಇವುಗಳಾದ ಮೇಲೆ ನಾನು ನೋಡಿದಾಗ ಪರಲೋಕದಲ್ಲಿ ತೆರೆದಿದ್ದ ಬಾಗಿಲು ಕಾಣಿಸಿತು; ಮತ್ತು ನನ್ನ ಸಂಗಡ ತುತೂರಿಯು ಮಾತಾಡುತ್ತದೋ ಎಂಬಂತೆ ನಾನು ಮೊದಲು ಕೇಳಿದ್ದ ವಾಣಿಯು ಕೇಳಿಸಿತು. ಇಲ್ಲಿಗೆ ಏರಿಬಾ, ಮುಂದೆ ಆಗಬೇಕಾದವುಗಳನ್ನು ನಿನಗೆ ತೋರಿಸುವೆನು ಎಂದು ಹೇಳಿತು.

**ಇವುಗಳಾದ ಮೇಲೆ ನಾನು ನೋಡಿದಾಗ** ಎಂಬ ಸೂತ್ರವು ಹೊಸ ದರ್ಶನಗಳನ್ನು ಪರಿಚಯಿಸುವದಕ್ಕೆ ಪ್ರಕಟನೆ ಪುಸ್ತಕದಲ್ಲಿ ಆಗಾಗ ಬಳಸಲ್ಪಟ್ಟಿರುತ್ತದೆ (ನೋಡಿರಿ 7:1, 9; 15:5; 18:1; 19:1). 1ನೇ ವಚನದಲ್ಲಿ, "ಇವುಗಳಾದ ಮೇಲೆ" ಎಂಬುದರ ಸ್ವಾಭಾವಿಕವಾದ ಅರ್ಥವು "ಏಳು ಪತ್ರಗಳ ವಿಷಯವಾದ ಮೊದಲನೆಯ ದರ್ಶನವು ಮುಕ್ತಾಯವಾದ ಬಳಿಕ" ಎಂದಾಗಿರುತ್ತದೆ. NCV ತರ್ಜುಮೆಯಲ್ಲಿ "ಈ *ದರ್ಶನದ* ಸಂಗತಿಗಳಾದ ಬಳಿಕ . . ." ಎಂದಿರುತ್ತದೆ (ಒತ್ತಿ ಹೇಳಿದ್ದು ನನ್ನದು). ಯೋಹಾನನಿಗೆ ಈಗಾಗಲೇ ಸಂಭವಿಸುತ್ತಿರುವ ಸಂಗತಿಗಳನ್ನು ತೋರಿಸಿದ ಬಳಿಕ, ಶೀಘ್ರದಲ್ಲಿ ಸಂಭವಿಸಲಿಕ್ಕಿರುವದನ್ನು ಆತನು ನೋಡಬೇಕೆಂಬುದು ಯೇಸುವಿನ ಬಯಕೆಯಾಗಿತ್ತು.

ಅನೇಕ ಸಹಸ್ರವರ್ಷಪೂರ್ವಾಡಳಿತವಾದಿಗಳು ನಂಬುವದೇನೆಂದರೆ 4 ಮತ್ತು 5 ಅಧ್ಯಾಯಗಳು ಅಂತರೀಕ್ಷಕ್ಕೆ ಎತ್ತಲ್ಪಡುವಿಕೆಯ ಬಳಿಕ ಏಳು ವರ್ಷಗಳ ಕಾಲ ಸಂಕಷ್ಟವು ಭೂಮಿಯ ಮೇಲೆ ಇರುವದರ ಕುರಿತು ಹೇಳುತ್ತವೆ ಎಂಬದೆ (ನೋಡಿರಿ *ಪರಿಚಯ*, *ಅರ್ಥೈಸುವದಕ್ಕೆ ಅನುಸಿರುಸವ ದಾರಿಗಳು*, *ಭವಿಷ್ಯವಾದಿ ಅರ್ಥೈಸುವ ದಾರಿ*). ಇದಕ್ಕೆ ಸಂಬಂಧ ಪಟ್ಟಂತೆ, ಕೆಲವು ಸಹಸ್ರವರ್ಷಪೂರ್ವಾಡಳಿತವಾದಿಗಳು ಕಲಿಸುವದೇನೆಂದರೆ ಏಳು ಸಭೆಗಳು ಸಭೆಯ ಏಳು ಕಾಲಾವಧಿಗಳನ್ನು ಪ್ರತಿನಿಧಿಸುವವುಗಳಾಗಿದ್ದು, ಲವೊದಿಕೀಯದ ಸಭೆಯು ಸಭೆಯ ಅಂತಿಮ ಯುಗವನ್ನು ಪ್ರತಿನಿಧಿಸುತ್ತದೆ ಎಂಬದೆ. ಅವರು "ಇವುಗಳಾದ ಮೇಲೆ" ಎಂಬುದರ ಅರ್ಥವು "ಸಭೆಯ ಏಳು ಕಾಲಾವಧಿಗಳು ಮುಗಿದ ಬಳಿಕ" ಎಂದಾಗಿರುತ್ತದೆಂದು ಅವರು ಕಲಿಸುತ್ತಾರೆ. ಏಳು ಸಭೆಗಳು ಸಭೆಯ ಏಳು ಯುಗಗಳನ್ನು ಪ್ರತಿನಿಧಿಸುವ*ದಿಲ್ಲ*, ಮತ್ತು "ಇವುಗಳಾದ ಮೇಲೆ" ಎಂಬುದು ಒಂದು ಕಲ್ಪನೆ ಮಾಡಿಕೊಂಡ "ಏಳನೆಯ ಯುಗ" ದ ಬಳಿಕ ಎಂದರ್ಥ *ಅಲ್ಲ*. ಈ ಮುಂಚೆ ತಿಳಿಸಿರುವ ಪ್ರಕಾರ, ಸಾಮರ್ಥ್ಯಗಳನ್ನು ಮತ್ತು ದುರ್ಬಲತೆಗಳನ್ನು ಒಳಗೊಂಡಿದ್ದ ಏಳು ಸಭೆಗಳು ಕೇವಲ ಆಸ್ಯ ಸೀಮೆಯ ಮತ್ತು ಪ್ರಥಮ ಶತಮಾನದಲ್ಲಿನ ರೋಮನ್ ಜಗತ್ತಿನಲ್ಲೆಲ್ಲಾ ಇದ್ದ ಸಭೆಗಳನ್ನು ಪ್ರತಿನಿಧಿಸುತ್ತವೆ.

**ನೋಡಿದಾಗ** (ἰδού, *idou*) ಎಂಬ ಪದವು 2ನೇ ವಚನದಲ್ಲಿ ಸಹ ಕಂಡು ಬರುವದಾಗಿದ್ದು ರೋಮಾಂಚನಗೊಳ್ಳುವಿಕೆಯನ್ನು ಸೂಚಿಸುತ್ತದೆ. ಕೆಲವು ತರ್ಜುಮೆಗಳು ಈ ವಚನಗಳ ಬಳಿಕ ಆಶ್ಚರ್ಯಸೂಚಕ ಚಿಹ್ನೆಗಳನ್ನು ಸೇರ್ಪಡೆಗೊಳಿಸುವ ಮೂಲಕ ಈ ರೋಮಾಂಚನಗೊಳ್ಳುವಿಕೆಯನ್ನು ಸೂಚಿಸುತ್ತವೆ. ಯೋಹಾನನು ಉತ್ಸುಕತೆಯಿಂದ ಮೇಲಕ್ಕೆ ನೋಡಿದಾಗ, ಆತನು **ಪರಲೋಕದಲ್ಲಿ ತೆರೆದಿದ್ದ ಬಾಗಿಲು** ಕಂಡನು. ಬಾಗಿಲು ತೆರೆದಿತ್ತಾದರೂ, ಯೋಹಾನನು ಒಳಗೆ ಪ್ರವೇಶಿಸುವದಕ್ಕೆ ಸಾಗಲಿಲ್ಲ, ಆದರೆ ಒಂದು ಆಮಂತ್ರಣಕ್ಕಾಗಿ ಕಾಯುತ್ತಿದ್ದನು. ಒಂದು **ತುತೂರಿಯ ಮಾತಾಡುತ್ತದೋ ಎಂಬಂತೆ** ಶಬ್ದವಾಯಿತು, ಅದು ಆತನು "ಮನುಷ್ಯಕುಮಾರನಂತೆ ಇರುವವನ" ದರ್ಶನವನ್ನು ಕಂಡ (1:13) ವೇಳೆ ಆತನ ಸಂಗಡ "ಮೊದಲು ಮಾತಾಡಿದ್ದ ಅದೇ ಸ್ವರವು" ಆಗಿತ್ತು (CEV). ಇದು ಬಹುಶಃ ಯೇಸುವಿನ ಸ್ವರವಾಗಿತ್ತು (1:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಆ ಸ್ವರವು ಆತನನನ್ನು "ಇಲ್ಲಿಗೆ ಏರಿಬಾ, ಮುಂದೆ ಆಗಬೇಕಾದವುಗಳನ್ನು ನಿನಗೆ ತೋರಿಸುವೆನು" ಎಂದು ಆಮಂತ್ರಿಸಿತ್ತು.

**ಮುಂದೆ ಆಗಬೇಕಾದವುಗಳನ್ನು** ಎಂಬುದರಲ್ಲಿ ಸಭೆಗಾಗಿ ಏನು ಸಂಭವಿಸುವದಕ್ಕಿದೆ, ರೋಮನ್ ಸಾಮ್ರಾಜ್ಯವು ತನ್ನ ಪಾಪಗಳಿಗಾಗಿ ಏನು ಫಲವನ್ನು ಕೊಯ್ಯಲಿದೆ, ಈ ಲೋಕವು ಹೇಗೆ ಅಳಿಸಿ ಹಾಕಲ್ಪಡುವದು, ಮತ್ತು ಮುಂದೆ ಬರಲಿರುವ ಲೋಕವು ಹೇಗಿರಲಿದೆ ಎಂಬುವುಗಳು ಸೇರಿದ್ದವು. ಈ ಪದಗುಚ್ಛದಲ್ಲಿರುವ ಒಂದು ಪ್ರಾಮುಖ್ಯವಾದ ಪದವೆಂದರೆ **ಆಗಬೇಕಾದ**. ಪ್ರಕಟನೆ ಪುಸ್ತಕವು "ಮುಂದೆ ಆಗ*ತಕ್ಕ*ವುಗಳ" ಅಥವಾ "ಆಗ*ಬಹುದಾದ*ವುಗಳು" ಎಂಬ ಕುರಿತಾಗಿರುವದಿಲ್ಲ, ಆದರೆ "ಆಗ*ಬೇಕಾದ*ವುಗಳ" ಕುರಿತಾಗಿರುತ್ತದೆ. ಅವುಗಳು ಸಂಭವಿಸ*ಲೇ ಬೇಕಾಗಿದ್ದವು*, ಮತ್ತು ಅವುಗಳು ಸಂಭವಿಸು*ವವು*, ಯಾಕೆಂದರೆ ಅವುಗಳು "ದೇವರ ಚಿತ್ತದ ಕಾರ್ಯಸಾಧಿಸುವಿಕೆ"[1] ಆಗಿದ್ದವು.

**ವಚನ 2.** ಆತನ ಆಸಕ್ತಿಯು ಕೇರಳಿಸಲ್ಪಟ್ಟಿತು, ಯೋಹಾನನು **ದೇವರಾತ್ಮವಶವಾದನು** (1:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಪ್ರತಿಕ್ರಿಯಿಸುವದಕ್ಕೆ ಸಿದ್ಧನಾಗಿದ್ದನು. ಯೋಹಾನನು ಪ್ರಕಟನೆಯ ವೇಳೆಉಲ್ಲಿ ದೇವರಾತ್ಮನಿಂದ "ಆಗಾಗ ವಶವಾಗುತ್ತಿದ್ದವನು ಮತ್ತು ಹೊರ ಬರುತ್ತಿದ್ದವನು" ಆಗಿರಲಿಲ್ಲ. ಬದಲಾಗಿ, "ದೇವರಾತ್ಮವಶವಾದೆನು" ಎಂಬುದು

*ಇಡೀ* ಪ್ರಕಟನೆಯ ವೇಳೆಯಲ್ಲಿ ಯೋಹಾನನು ಪವಿತ್ರಾತ್ಮನಿಂದ ನಡಿಸಲ್ಪಡುತ್ತಿದ್ದನು, ಅಥವಾ ಆತನ ಆತ್ಮವು ಕರ್ತನ ನಿಯಂತ್ರಣದಲ್ಲಿತ್ತು ಎಂಬುದನ್ನು ಒತ್ತಿ ಹೇಳುವದಕ್ಕಾಗಿ ಆಗಾಗ ಬಳಸಲ್ಪಡುವ ಒಂದು ನಾಟಕೀಯವಾದ ಸಾಧನವಾಗಿರುತ್ತದೆ (ನೋಡಿರಿ 17:3; 21:10). **ಕೂಡಲೆ**, ಯೋಹಾನನನ್ನು ಪರಲೋಕದಿ ತೆರೆದಿದ್ದ ಬಾಗಿಲ ಮೂಲಕ ಸಿಂಹಾಸನದ ಕೋಣೆಯಲ್ಲಿ ಕರೆದೊಯ್ಯಲಾಯಿತು. ಅದು ಸಾಧ್ಯವಿರುತ್ತದೆ, ಆದರೆ ಯೋಹಾನನು ದೈಹಿಕವಾಗಿ ಏರಿ ಹೋಗಿರುವ ಸಂಭಾವ್ಯತೆಯು ಇರುವದಿಲ್ಲ (10:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಯೋಹಾನನು ಪರಲೋಕಕ್ಕೆ ಎತ್ತಿಕೊಂಡು ಹೋಗಲ್ಪಟ್ಟ ವೇಳೆ, ಆತನು ನೋಡಿದಾಗ **ಪರಲೋಕದಲ್ಲಿ ಒಂದು ಸಿಂಹಾಸನವಿತ್ತು; ಸಿಂಹಾಸನದ ಮೇಲೆ ಒಬ್ಬನು ಕೂತಿದ್ದನು. ಸಿಂಹಾಸನ** (Throne) ಎಂಬುದು ಗ್ರೀಕ್ ಪದವಾದ θρόνος (*thronos*) ಎಂಬುದರ ಲಿಪ್ಯಂತರಣವಾಗಿರುತ್ತದೆ. ಒಂದೇ ಒಂದು ಕೇಂದ್ರಿಯ ಸಿಂಹಾಸನವಿರುತ್ತದೆ. ಕೆಲವು ಸಾರಿ ಇದು ದೇವರ ಸಿಂಹಾಸನ ಎಂದು ಕರೆಯಲ್ಪಡುತ್ತದೆ (ಮತ್ತಾಯ 5:34) ಮತ್ತು ಕೆಲವು ಸಾರಿ ಅದು ಯೇಸುವಿನ ಸಿಂಹಾಸನ ಎಂದು ಕರೆಯಲ್ಪಡುತ್ತದೆ (ಮತ್ತಾಯ 25:31). ಪ್ರಕಟನೆ 22:1, 3ರಲ್ಲಿ, ಅದು "ದೇವರ *ಮತ್ತು* ಯಜ್ಞದ ಕುರಿಯಾದಾತನ ಸಿಂಹಾಸನ" ಎಂದು ಕರೆಯಲ್ಪಟ್ಟಿದೆ (ಒತ್ತಿ ಹೇಳಿದ್ದು ನನ್ನದು). ಸಿಂಹಾಸನದ ಮೇಲೆ ಕೂತಿದ್ದವನು (ಮತ್ತು ಕೂತಿರುವವನು) "ದೇವರಾದ ಕರ್ತನು . . . ಸರ್ವಶಕ್ತನು, ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರುವಂಥವನು" (ವ. 8). 4:5ರಲ್ಲಿ ಆತನು ಪವಿತ್ರಾತ್ಮನ ಜೊತೆಯಲ್ಲಿ ಮತ್ತು 5:13ರಲ್ಲಿ ಯೇಸುವಿನೊಂದಿಗೆ (ಕುರಿಯಾದಾತನು) ಪ್ರಸ್ತಾಪಿಸಲ್ಪಟ್ಟಿರುವದರಿಂದ, ಇದು ತಂದೆಯಾದ ದೇವರ ಕುರಿತ ಒಂದು ಬಣ್ಣನೆಯಾಗಿರುತ್ತದೆ.

**ವಚನ 3.** ಯೋಹಾನನಿಗೆ ತಂದೆಯಾದ ದೇವರನ್ನು ಬಣ್ಣಿಸುವ ಅಸಾಧ್ಯವಾದ ಸವಾಲು ಎದುರಾಗಿತ್ತು. "ದೇವರು ಆತ್ಮಸ್ವರೂಪನು" (ಯೋಹಾನ 4:24) ಆಗಿದ್ದಾನೆ ಮತ್ತು "ದೇವರನ್ನು ಯಾರೂ ಎಂದೂ ಕಂಡಿಲ್ಲ" ವಾದ್ದರಿಂದ (ಯೋಹಾನ 1:18), ಯೋಹಾನನು ಆತನನ್ನು ಬಣ್ಣಿಸುವದಕ್ಕೆ ಹೇಗೆ ಶಕ್ತನಾಗಿರುವದಕ್ಕೆ ಸಾಧ್ಯವಿತ್ತು? ಯೋಹಾನನು ಇದಕ್ಕೆ ಮುನ್ನ "ದೇವರು ಬೆಳಕಾಗಿದ್ದಾನೆ" ಎಂದು ಹೇಳಿದ್ದನು (1 ಯೋಹಾನ 1:5; ನೋಡಿರಿ 1 ತಿಮೊಥೆ 6:16). ಇಲ್ಲಿ ಆತನು ಕರ್ತನನ್ನು ಬೆಳಕು ಮತ್ತು ಬಣ್ಣದ ಪದಗಳಲ್ಲಿ ಬಣ್ಣಿಸಿರುತ್ತಾನೆ: **ಕೂತಿದ್ದವನು ಕಣ್ಣಿಗೆ ಸೂರ್ಯಕಾಂತ ಪದ್ಮರಾಗ ಮಣಿಗಳಂತೆ ಕಾಣುತ್ತಿದ್ದನು. ಸಿಂಹಾಸನದ ಸುತ್ತಲು ಪಚ್ಚೆಯಂತೆ ತೋರುತ್ತಿದ್ದ ಮುಗಿಲುಬಿಲ್ಲು ಇತ್ತು.**

**ಸೂರ್ಯಕಾಂತ ಮಣಿ** (ಕಲ್ಲು) ಒಂದು ಜನಪ್ರಿಯವಾದ ಆಭರಣವಾಗಿತ್ತು (ಯೆಹೆಜ್ಕೇಲ 28:13), ಅದು ಮಹಾಯಾಜಕನು ಹಾಕಿಕೊಂಡಿರುತ್ತಿದ್ದ ಎದೆಕವಚ (ವಿಮೋಚನಕಾಂಡ 28:20; 39:13) ಮತ್ತು ಹೊಸ ಯೆರೂಸಲೇಮ್ ಪಟ್ಟಣದ ಅಸ್ತಿವಾರ ಇವೆರಡರಲ್ಲಿಯೂ ಕಂಡು ಬರುತ್ತದೆ (ಪ್ರಕಟನೆ 21:18, 19). ಸೂರ್ಯಕಾಂತವು ಕೆಲವು ಸಾರಿ ಹಸಿರು ಬಣ್ಣದಲ್ಲಿರುತ್ತಿತ್ತಾದರೂ, ಯೋಹಾನನು ಬಣ್ಣರಹಿತ ವಿಧವಾದದ್ದನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದು, ಅನಂತರದಲ್ಲಿ ಆತನು ಪರಲೋಕದ ಯೆರೂಸಲೇಮಿನ ಪ್ರಕಾಶವು "ಥಳಥಳಿಸುವ ವಜ್ರವೋ [ಸೂರ್ಯಕಾಂತವೋ] ಎಂಬಂತೆ ಕಾಣಿಸಿತು" (21:11) ಎಂದು ಬರೆದನು. ಪ್ರಾಚೀನ ಬರಹಗಾರರು ರತ್ನಾಭರಣಗಳಾಗಿ ಬಳಸುವ ಪದಗಳು ಏಕ ರೀತಿಯಾಗಿರಲಿಲ್ಲ, ಆದ್ದರಿಂದ ಅದಕ್ಕೆ ಆಧುನಿಕ ಕಾಲದ ಸಮಾನ ಪದವು ಯಾವದೆಂಬ

ವಿಚಾರದಲ್ಲಿ ಒಬ್ಬನು ಹಠವಾದವನ್ನು ಮಾಡುವದಕ್ಕೆ ಸಾಧ್ಯವಿಲ್ಲ. ಒಂದು ವಜ್ರವು ಥಳಥಳಿಸುತ್ತಾ ಮತ್ತು ಪ್ರಕಾಶಿಸುತ್ತಾ, ಮುಗಿಲುಬಿಲ್ಲಿನ ಎಲ್ಲಾ ಬಣ್ಣಗಳನ್ನು ಪ್ರತಿಫಲಿಸುತ್ತಿರುವದನ್ನು ಊಹಿಸಿಕೊಳ್ಳಿರಿ. ವಜ್ರ ಮತ್ತು ಸೂರ್ಯಕಾಂತಗಳನ್ನು ಮೌಲ್ಯದಲ್ಲಿ ಸಮಾನವಾಗಿ ಹೋಲಿಕೆ ಮಾಡುವದಕ್ಕಾಗುವದಿಲ್ಲ, ಆದರೆ ಅವೆರಡರ ವಿಕ್ಷಣ ಪರಿಣಾಮ ಮಾತ್ರ ಒಂದೇ ಆಗಿರಬಲ್ಲದು. ಸೂರ್ಯಕಾಂತ ಕಲ್ಲು ದೇವರ ಮಹಿಮೆಯನ್ನು ಪ್ರತಿನಿಧಿಸುತ್ತದೆ (21:11), ಮತ್ತು ಆತನ ಪರಿಶುದ್ಧತೆಯನ್ನು ಸಹ ಪ್ರತಿನಿಧಿಸಬಹುದಾಗಿದೆ.

**ಪದ್ಮರಾಗ** ಕಲ್ಲು ಬೈಬಲ್ ಕಾಲಗಳಲ್ಲಿ ಬಹು ಅಮೂಲ್ಯವೆಂದೆಣಿಸಲ್ಪಟ್ಟಿತ್ತು. ಅದು ಸಹ ಮಹಾಯಾಜಕನ ಎದೆಕವಚದಲ್ಲಿ (ವಿಮೋಚನಕಾಂಡ 28:17; KJV) ಮತ್ತು ಪರಲೋಕದಲ್ಲಿನ ಪಟ್ಟಣದ ಅಸ್ತಿವಾರದೊಳಗೆ ಕಂಡು ಬರುತ್ತದೆ (21:20). ಅದು ಇಂದು ಕಾರ್ನೇಲಿಯನ್ ಶಿಲೆ ಎಂದು ಎಂದು ಕರೆಯಲ್ಪಡುವ ರತ್ನವಾಗಿತ್ತು ಎಂದು ಅನೇಕರು ಭಾವಿಸುತ್ತಾರೆ (RSV, NIV, NCV), ಅದು ಸಾಮಾನ್ಯವಾಗಿ ಬಣ್ಣದಲ್ಲಿ ಗಾಢ ಕೆಂಪು ಆಗಿದ್ದು ಆಕಾರದಲ್ಲಿ ಮಾಣಿಕ್ಯದಂತೆ ಕಾಣಿಸುತ್ತಿತ್ತು. ಕಾರ್ನೇಲಿಯನ್ ಎಂಬುದು ಚಾಲ್ಸೆಡೋನಿಯದ ಒಂದು ವಿಧವಾಗಿದ್ದು, ಅದು ಯೋಹಾನನ ದಿನದಲ್ಲಿದ್ದಂಥ ಅಸಲು ಬರೆಯಲ್ಪಟ್ಟು ಕೆತ್ತನೆ ಮಾಡಿದಂಥ ರತ್ನಾಭರಣವಾಗಿತ್ತು (ನೋಡಿರಿ 21:19). (KJVಯಲ್ಲಿರುವ ವಿಮೋಚನಕಾಂಡ 28:17ನ್ನು NASBಯಲ್ಲಿರುವ ಅದೇ ವಚನದೊಂದಿಗೆ ಹೋಲಿಸಿ ನೋಡಿರಿ.) "ಒಬ್ಬನು ತನ್ನ ಕೈಯಲ್ಲಿ ಕಾರ್ನೇಲಿಯನ್ [ಪದ್ಮರಾಗ] ಮಣಿಯನ್ನು ಹಿಡಿದುಕೊಂಡಿರುವಾಗ, ಆ ಮಣಿಯೊಳಗೆ ಬೆಂಕಿಯು ಹೊಗೆಯಾಡುತ್ತಿರುವಂತೆ ಕಾಣುತ್ತದೆ."[2] ಈ ಶಿಲೆಯು ದೇವರ ತೀಕ್ಷ್ಣವಾದ ಕೋಪಾಗ್ನಿಗೆ ಸಂಕೇತವಾಗುತ್ತದೆ.

**ಪಚ್ಚೆ** ಎಂಬುದು ಬಹುಶಃ ಆ ಹೆಸರಿನಿಂದ ಕರೆಯಲ್ಪಡುವ ಶಿಲೆಯೇ ಆಗಿರಬಹುದಾಗಿದೆ, ಅದೊಂದು ಗಾಢವಾದ, ಹೊಳೆಯುವ ಹಸಿರು ಬಣ್ಣದ್ದಾಗಿದ್ದು - ಇದು ದೇವರ ಕರುಣೆಯನ್ನು ಸೂಚಿಸುವ ಸಾಧ್ಯತೆಯಿದೆ. ಅಂತಹ ಒಂದು ವ್ಯಾಖ್ಯಾನವು **ಮುಗಿಲುಬಿಲ್ಲಿನ** ಸಂಕೇತ್ವದೊಂದಿಗೆ ಸಾಮಂಜಸ್ಯತೆಯನ್ನು ಹೊಂದಿರುತ್ತದೆ (ನೋಡಿರಿ ಆದಿಕಾಂಡ 9:8-17). ಪ್ರಕಟನೆ ಪುಸ್ತಕದಲ್ಲಿ, ವಿವಿಧ ವರ್ಣದ್ದಾಗಿರುವ ಬದಲಾಗಿ, ಮುಗಿಲುಬಿಲ್ಲು ಒಂದು ಪಚ್ಚೆಯ ಬಣ್ಣದ್ದಾಗಿರುತ್ತದೆ. ಬಣ್ಣಗಳ ಮನೋಶಾಸ್ತ್ರೀಕವಾದ ಪರಿಣಾಮಗಳನ್ನು ಅಧ್ಯಯನ ಮಾಡುವವರು ನಮಗೆ ಹೇಳುವದೇನೆಂದರೆ ಹಸಿರು ವಿಶ್ರಾಂತಿಕರ ಬಣ್ಣವಾಗಿದೆ. ಆಸ್ಪತ್ರೆಗಳ ಹಾಗೂ ಅದೇ ರೀತಿಯ ಸಂಸ್ಥೆಗಳ ಗೋಡೆಗಳಿಗೆ ಕೆಲವು ಸಾರಿ ತಿಳಿ ಹಸಿರು ಬಣ್ಣವನ್ನು ಹಚ್ಚಲಾಗಿರುತ್ತದೆ.

"ಮುಗಿಲುಬಿಲ್ಲು" ಎಂದು ಅನುವಾದಿಸಲ್ಪಟ್ಟಿರುವ ἶρις (*iris*) ಎಂಬ ಗ್ರೀಕ್ ಪದದ ಅರ್ಥವು "ಬಿಲ್ಲು" ಅಥವಾ "ವೃತ್ತ" ಎಂದಾಗಿರುತ್ತದೆ. ಕೆಲವು ವ್ಯಕ್ತಿಗತವಾದ ತರ್ಜುಮೆಗಳು ಆ ಪದವನ್ನು "ಚಕ್ರ" ಎಂದು ಸಹ ಅನುವಾದಿಸಿರುತ್ತವೆ. ಹೇಗೂ, ಬಹಳಷ್ಟು ತರ್ಜುಮೆಗಳು ಆ ಪದವನ್ನು "ಮುಗಿಲುಬಿಲ್ಲು" ಅನುವಾದಿಸುತ್ತವೆ (ನೋಡಿರಿ ಯೆಹೆಜ್ಕೇಲ 1:28; ಪ್ರಕಟನೆ 10:1). ಮುಗಿಲುಬಿಲ್ಲು ನಮಗೆ ದೇವರ ಕೋಪವನ್ನು ಮತ್ತು ದೇವರ ಕರುಣೆಯನ್ನು ನಮಗೆ ಜ್ಞಾಪಿಸುತ್ತದೆ. ಅಲ್ಲದೆ ದೇವರು ತನ್ನ ಮಾತನ್ನು ಕಾಪಾಡಿಕೊಳ್ಳುವವನು ಎಂಬುದಕ್ಕೆ ಸಹ ಮುಗಿಲುಬಿಲ್ಲು ಪುರಾವೆಯಾಗಿರುತ್ತದೆ: ಆತನು ನೋಹನ ಸಂಗಡ ಒಂದು ಒಡಂಬಡಿಕೆಯನ್ನು ಮಾಡಿಕೊಂಡನು (ಆದಿಕಾಂಡ 9:12-17), ಮತ್ತು ಆತನು ಆ ವಾಗ್ದಾನವನ್ನು ಕಾಪಾಡಿದ್ದಾನೆ. ಹೀಗೆ ಮುಗಿಲುಬಿಲ್ಲು ಹಿಂಸೆಗೊಳಗಾಗಿದ್ದ ಕ್ರೈಸ್ತರಿಗೆ ದೇವರು ಅವರನ್ನು ಕಾಪಾಡಿ ಸಂರಕ್ಷಿಸುವನೆಂಬ ತನ್ನ ವಾಗ್ದಾನವನ್ನು ಕಾಪಾಡುವನೆಂಬ ಭರವಸವನ್ನು ಕೊಟ್ಟಿತು.

**ವಚನ 4.** ಮುಂದೆ ಬರುವ ವಿವರಗಳು ಪಂಡಿತರಿಗೆ ದಿಗ್ಭ್ರಾಂತಿ ಉಂಟು ಮಾಡುತ್ತವೆ:

ಇಪ್ಪತ್ತುನಾಲ್ಕು ಹಿರಿಯರು ಮತ್ತು ನಾಲ್ಕು ಜೀವಿಗಳು. ನಾವು ಸಂಭಾವ್ಯ ಅರ್ಥಗಳೊಂದಿಗೆ ಹೊಡೆದಾಡುತ್ತಿರುವ ವೇಳೆ, ಈ ಸಂಕೇತಗಳ ಉದ್ದೇಶವು ಮತ್ತು ಆ ರತ್ನಾಭರಣಗಳು, ಮುಗಿಲುಬಿಲ್ಲು, ಬಿರುಗಾಳಿ, ಮತ್ತು ದೀಪಗಳ ಸಂಕೇತ್ವದ ಉದ್ದೇಶ ಒಂದೇ ಆಗಿರುತ್ತದೆ: ದೇವರ ವೈಭವವನ್ನು ತೋರಿಸುವದೇ. **ಇದಲ್ಲದೆ ಸಿಂಹಾಸನದ ಸುತ್ತಲು ಇಪ್ಪತ್ತುನಾಲ್ಕು ಸಿಂಹಾಸನಗಳಿದ್ದವು.** KJVಯಲ್ಲಿ "ಆಸನಗಳು" ಎಂದಿರುತ್ತದೆ, ಆದರೆ ಗ್ರೀಕ್ ಭಾಷೆಯಲ್ಲಿ θρόνους (*thronous*) ಎಂದಿದ್ದು ಅದು "ಸಿಂಹಾಸನ" ಎಂಬುದರ ಬಹುವಚನವಾಗಿರುತ್ತದೆ. **ಹಿರಿಯರು** ಎಂಬುದು ಗ್ರೀಕ್ ಭಾಷೆಯ πρεσβύτερος (*presbuteros*) ಎಂಬುದರ ಒಂದು ಬಹುವಚನ ರೂಪವಾಗಿದೆ. ಈ ಸನ್ನಿವೇಶದಲ್ಲಿ ಅದು ಸಭೆಯಲ್ಲಿರುವ ಅಧಿಕಾರಿಗಳನ್ನು ಸೂಚಿಸುವದಿಲ್ಲ, ಆದರೆ ಕೇವಲ ಹಿರಿಯರಾಗಿದ್ದ ವ್ಯಕ್ತಿಗಳು ಎಂದಷ್ಟೆ ಹೇಳುತ್ತದೆ, ಸೂಚ್ಯಾರ್ಥವಾಗಿ ಹೇಳುವದಾದರೆ, ಹೆಚ್ಚು ಪರಿಪಕ್ವವಾದವರು ಎಂದಾಗಿರುತ್ತದೆ. ಇವರು ದೇವರ ಮುಂದೆ ಸಾಷ್ಟಾಂಗ ಬೀಳುತ್ತಿದ್ದ ವೃದ್ಧರಾದ ಮೂಲಪಿತೃಗಳಾಗಿದ್ದರೆಂಬ ವಾಸ್ತವಾಂಶವು ದೃಶ್ಯದ ಪ್ರಭಾವವನ್ನು ಮತ್ತಷ್ಟು ಹೆಚ್ಚಿಸುವದಾಗಿದೆ. ಹಿರಿಯರು **ಶುಭ್ರವಸ್ತ್ರ ಧರಿಸಿಕೊಂಡಿದ್ದರು,** ಮತ್ತು **ಅವರ ತಲೆಗಳ ಮೇಲೆ ಚಿನ್ನದ ಕಿರೀಟಗಳಿದ್ದವು.** "ಕೀರಿಟಗಳು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು στέφανος (*stephanos*) ಎಂಬ ಪದದ ಬಹುವಚನ ರೂಪವಾಗಿದೆ (2:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಇಪ್ಪತ್ತುನಾಲ್ಕು ಹಿರಿಯರು ಯಾರಾಗಿದ್ದರು? ಯೇಸುವು "ಜಯಹೊಂದುವ" ಕ್ರೈಸ್ತರಿಗೆ ವಾಗ್ದಾನ ಮಾಡಿದಂಥ ಆಶೀರ್ವಾದಗಳಲ್ಲಿ ಇವರು ಮೂರು ಆಶೀರ್ವಾದಗಳನ್ನು ಹೊಂದಿಕೊಂಡಿದ್ದರು ಎಂಬುದನ್ನು ಗಮನಿಸಿರಿ: ಅವರು ಆಳ್ವಿಕೆ ಮಾಡುತ್ತಿದ್ದರು (ನೋಡಿರಿ 2:26, 27; 3:21), ಅವರು ಶುಭ್ರವಸ್ತ್ರಗಳನ್ನು ಧರಿಸಿದ್ದರು (ನೋಡಿರಿ 3:5), ಮತ್ತು ಅವರು ಜಯಮಾಲೆಗಳನ್ನು (ಕಿರೀಟಗಳನ್ನು) ಹೊಂದಿದ್ದರು (ನೋಡಿರಿ 2:10). ಈ ಹಿರಿಯರು ಜಯ ಹೊಂದಿದ್ದ ಕ್ರೈಸ್ತರನ್ನು ಪ್ರತಿನಿಧಿಸುತ್ತಾರೆಂಬುದನ್ನು ಈ ವಾಸ್ತವಾಂಶಗಳು ತೋರಿಸುತ್ತವೆ. 5:10ರಲ್ಲಿ, ಅನೇಕ ಪ್ರಾಚೀನ ಹಸ್ತಪ್ರತಿಗಳಲ್ಲಿ ಹಿರಿಯರು ಹೀಗೆ ಹೇಳುತ್ತಿರುವದಾಗಿ ಬರೆಯಲಾಗಿರುತ್ತದೆ, "ನಮ್ಮನ್ನು . . . ರಾಜರನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದ್ದೀ; ನಾವು ಭೂಮಿಯ ಮೇಲೆ ಆಳುವೆವು" (KJV; ಒತ್ತಿ ಹೇಳಿದ್ದು ನನ್ನದು). ಈ ವಾಚನವು ಹಿರಿಯರು ಕ್ರೈಸ್ತರನ್ನು ಪ್ರತಿನಿಧಿಸುತ್ತರೆಂಬ ವ್ಯಾಖ್ಯಾನದೊಂದಿಗೆ ಪರಸ್ಪರ ಸಂಬಂಧವನ್ನು ಹೊಂದಿರುತ್ತದೆ. ಹಿರಿಯರು ಕ್ರೈಸ್ತರನ್ನು ಪ್ರತಿನಿಧಿಸುತ್ತಾರೆಂಬ ದೃಢವಾದ ಹೇಳಿಕೆಗೆ ಇರುವ ಪ್ರಾಥಮಿಕ ಆಕ್ಷೇಪಣೆಯೆಂದರೆ ಇವರು ರಕ್ಷಣೆ ಹೊಂದಿವರಿಗಿಂತ ಭಿನ್ನರು ಎಂದು ತೋರುತ್ತಾರೆ ಎಂಬುದೆ (7:13, 14; 14:3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಹೇಗೂ, ಸಾಮಂಜಸ್ಯತೆಯನ್ನು ಕಾಪಾಡಿಕೊಂಡು ಹೋಗುವದು ಯೋಹಾನನ ಪ್ರಮುಖ ಗುರಿಯಾಗಿರಲಿಲ್ಲ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಹಾಗಾದರೆ, **ಇಪ್ಪತ್ತುನಾಲ್ಕು** ಸಂಖ್ಯೆಯ ಮರ್ಮವಾದರೂ ಏನಾಗಿರುವದು? ಇದು ಹನ್ನೆರಡು ಸಂಖ್ಯೆಯಾಗಿದೆ, ಇದು ಅನೇಕ ಸಾರಿ ಧಾರ್ಮಿಕ ಸಂಪೂರ್ಣತೆಯನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿದ್ದು ಎರಡು ಅಂಕೆಯಿಂದ ತೀಕ್ಷ್ಣಗೊಳಿಸಲ್ಪಡುತ್ತದೆ. ಈ ಸಾಂಕೇತಿಕತೆಯು ಸೂಚಿಸುವದೇನೆಂದರೆ ಇಪ್ಪತ್ತುನಾಲ್ಕು ಎಂಬುದು "ಸಾಯಬೇಕಾದರೂ ನಂಬಿಗಸ್ತರಾಗಿದ್ದ" *ಎಲ್ಲರನ್ನೂ* ಪ್ರತಿನಿಧಿಸುತ್ತದೆ ಎಂಬುದೆ (2:10).

"ಇಪ್ಪತ್ತುನಾಲ್ಕು" ಅಂಕೆಗೆ ಸಂಬಂಧಿಸಿದಂತೆ ಇನ್ನು ಹಲವಾರು ಸಲಹೆಗಳು ಮಾಡಲ್ಪಟ್ಟಿರುತ್ತವೆ. ಉದಾಹರಣೆಗೆ, ಹಿರಿಯರು ಪ್ರತಿಯೊಂದು ಯುಗಕ್ಕೆ ಸೇರಿದ

ವಿಮೋಚಿಸಲ್ಪಟ್ಟವರನ್ನು ಪ್ರತಿನಿಧಿಸುತ್ತಾರೆ ಎಂಬುದು. ಪ್ರಕಟನೆ ಪುಸ್ತಕವು ಹನ್ನೆರಡು ಗೋತ್ರಗಳನ್ನು (21:12) ಮತ್ತು ಹನ್ನೆರಡು ಅಪೊಸ್ತಲರನ್ನು (21:14) ಕುರಿತು ಪ್ರಸ್ತಾಪಿಸುತ್ತದೆಂಬುದನ್ನು ಅವರು ಗಮನಕ್ಕೆ ತರುತ್ತಾರೆ. ಹನ್ನೆರಡು ಗೋತ್ರಗಳು (ಹಳೆಯ ಒಡಂಬಡಿಕೆಯಲ್ಲಿ ದೇವರ ಜನರನ್ನು ಪ್ರತಿನಿಧಿಸುವವರು) ಜೊತೆಗೆ ಹನ್ನೆರಡು ಅಪೊಸ್ತಲರು (ಹೊಸ ಒಡಂಬಡಿಕೆಯಲ್ಲಿ ದೇವರ ಜನರನ್ನು ಪ್ರತಿನಿಧಿಸುವವರು) ಒಟ್ಟು ಸೇರಿದರೆ ಇಪ್ಪತ್ತುನಾಲ್ಕು ಆಗುತ್ತದೆ. ಅಲ್ಲದೆ ಅವರು ಗಮನಕ್ಕೆ ತರುವದೇನೆಂದರೆ 15:3ರಲ್ಲಿ ವಿಮೋಚಿಸಲ್ಪಟ್ಟವರು "ಮೋಶೆಯ ಹಾಡನ್ನೂ ಯಜ್ಞದ ಕುರಿಯಾದಾತನ ಹಾಡ*ನ್ನೂ*" ಹಾಡುತ್ತಾರೆಂಬುದೆ (ಒತ್ತಿ ಹೇಳಿದ್ದು ನನ್ನದು). ಇನ್ನು ಕೆಲವರು ಇದನ್ನು ಲೇವಿಯನ ಯಾಜಕ ಗೋತ್ರವು ಕೆಲಸಕ್ಕನುಗುಣವಾಗಿ ಇಪ್ಪತ್ತುನಾಲ್ಕು ವಿಭಾಗಗಳನ್ನು ಹೊಂದಿತ್ತು ಎಂಬುದರೊಂದಿಗೆ ಸಂಬಂಧ ಪಟ್ಟಿರುತ್ತದೆಂದು ಕಂಡುಕೊಳ್ಳುತ್ತಾರೆ (ನೋಡಿರಿ 1 ಪೂರ್ವಕಾಲವೃತ್ತಾಂತ 24:18; 28:21; 2 ಪೂರ್ವಕಾಲವೃತ್ತಾಂತ 8:14; 31:2, 17; 35:10; ಲೂಕ 1:5, 8, 9). ಪ್ರಕಟನೆ 4ರಲ್ಲಿ ಹಿರಿಯರು ದೇವರನ್ನು ಆರಾಧಿಸಿದರಾದ್ದರಿಂದ, ಬಹುಶಃ ಈ ಸಂಖ್ಯೆಯು ಅವರು ಯಾಜಕರಾಗಿದ್ದರೆಂಬುದನ್ನು ಒತ್ತಿ ಹೇಳುತ್ತಿರಬಹುದಾಗಿದೆ. ಈ ವ್ಯಾಖ್ಯಾನದ ವಿಷಯವಾಗಿ, ಇಪ್ಪತ್ತುನಾಲ್ಕು ಸಂಖ್ಯೆಯಿಂದ ಹಿರಿಯರ ಯಾಜಕತ್ವವು ಸೂಚ್ಯಾರ್ಥವಾಗಿ ತಿಳಿಸಲ್ಪಟ್ಟಿದಾದರೂ, ಇದರರ್ಥವು ಪರಲೋಕದಲ್ಲಿ ನಮಗೋಸ್ಕರ ವಿಜ್ಞಾಪನೆ ಮಾಡುವಂತಹ ಹಿರಿಯರ ಒಂದು ಶ್ರೇಷ್ಠರಾದ-ದೇವಜನರ ಗುಂಪು ಇರುತ್ತದೆಂದು ಆಗಿರು*ವದಿಲ್ಲ* ಎಂಬುದನ್ನು ಒತ್ತಿ ಹೇಳತಕ್ಕದ್ದು. ಕ್ರೈಸ್ತರೆಲ್ಲರೂ ಯಾಜಕರಾಗಿದ್ದಾರೆ (1 ಪೇತ್ರ 2:5) ಮತ್ತು ನಮಗೆ ಪರಲೋಕದಲ್ಲಿ ಒಬ್ಬನೇ ಮಧ್ಯಸ್ಥನು ಇದ್ದಾನೆ (1 ತಿಮೊಥೆ 2:5, 6) ಎಂಬುದಾಗಿ ಹೊಸ ಒಡಂಬಡಿಕೆಯು ಕಲಿಸುತ್ತದೆ.

ಹೇಗೂ, ಈ ಸಂಖ್ಯೆಯ ಅತ್ಯಂಥ ಮಹತ್ವಪೂರ್ಣ ಅಂಶವು 10 ಮತ್ತು 11 ವಚನಗಳಲ್ಲಿ ಕಂಡು ಬರುತ್ತದೆ: ಈ ವೃದ್ಧರಾದ ಮೂಲಪಿತೃಗಳು ದೇವರ ಮುಂದೆ ಅಡ್ಡ ಬಿದ್ದು ತಮ್ಮ ಕಿರೀಟಗಳನ್ನು ಸಿಂಹಾಸನದ ಮುಂದೆ ಇಡುತ್ತಾ, "ಕರ್ತನೇ, ನಮ್ಮ ದೇವರೇ, *ನೀನು* ಪ್ರಭಾವ ಮಾನ ಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ" ಎಂದು ಹಾಡಿದರು (ಒತ್ತಿ ಹೇಳಿದ್ದು ನನ್ನದು). ಅವರು ಆನಂದಿಸಿದ ಯಾವ ಮಹಿಮೆಯೇ ಆಗಲಿ ಅದು ಒಂದು ಪ್ರತಿಫಲನಗೊಂಡಿದ್ದ ಮಹಿಮೆಯಾಗಿದ್ದು; ಅವರು ತಮ್ಮ ಘನತೆಗೇರಿಸಲ್ಪಟ್ಟ ಸ್ಥಾನಮಾನಕ್ಕಾಗಿ ಯಾವ ಶ್ರೇಯಸ್ಸನ್ನೂ ತೆಗೆದುಕೊಳ್ಳಲು ಸಾಧ್ಯವಿರಲಿಲ್ಲ ದೇವರ ಮಾತ್ರವೇ ಸ್ತುತಿಗೆ ಯೋಗ್ಯನಾಗಿದ್ದನು.

**ವಚನ 5.** ಈ ವಚನವು ಸಿಂಹಾಸನದ ಮೇಲೆ ಕೂತಿದ್ದಾತನ ಕುರಿತಾಗಿ ಇನ್ನಷ್ಟು ಚಿತ್ರಣವನ್ನು ಒದಗಿಸುತ್ತದೆ: **ಸಿಂಹಾಸನದೊಳಗಿಂದ ಮಿಂಚುಗಳೂ ವಾಣಿಗಳೂ ಗುಡುಗುಗಳೂ ಹೊರಡುತ್ತವೆ.** ಗುಡುಗು ಸಿಡಿಲುಗಳ ಗಾಳಿಯ ಸಂಕೇತವು ಶಾಸ್ತ್ರಗಳಲ್ಲಿ ದೇವರ ಶಕ್ತಿಯನ್ನು, ವಿಶೇಷವಾಗಿ ತನ್ನನ್ನು ಕರ್ತನೆಂದು ಒಪ್ಪಿಕೊಳ್ಳದಿರುವವರನ್ನು ದಂಡಿಸುವದಕ್ಕೆ ಆತನಿಗಿರುವ ಶಕ್ತಿಯನ್ನು ಬಣ್ಣಿಸುವದಕ್ಕೆ ಬಳಸಲ್ಪಟ್ಟಿದೆ (ನೋಡಿರಿ 1 ಸಮುವೇಲ 2:10). **ಮಿಂಚುಗಳು ಗುಡುಗುಗಳೂ** ಭೂಮಿಯ ಮೇಲೆ ಶೀಘ್ರದಲ್ಲಿಯೇ ಬರಲಿಕ್ಕಿದ್ದ ಬಿರುಗಾಳಿಗೆ ಪೂರ್ವಸೂಚಕಗಳಾಗಿದ್ದವು (ನೋಡಿರಿ 8:5; 11:19; 16:18). **ವಾಣಿಗಳು** ಎಂಬುದು φωνή (*phōnē*) ಎಂಬ ಗ್ರೀಕ್ ಪದದ ಬಹುವಚನ ರೂಪವಾಗಿದೆ, ಇದು "ಸ್ವರ" ಎಂಬುದಕ್ಕಿರುವ ಪದವಾಗಿದೆ. "ಸ್ವರಗಳು" (KJV) ಎಂಬುದರ ಜೊತೆಯಲ್ಲಿ, ಈ ಪದದ ಸಾಮಾನ್ಯ ಅರ್ಥವು "ಶಬ್ದಗಳು" ಅಥವಾ "ಧ್ವನಿಗಳು" ಎಂದು ಸಹ ಆಗಿರಬಲ್ಲದು. NIV ಮತ್ತು NRSV

ತರ್ಜುಮೆಗಳಲ್ಲಿ "ಗುಡುಗಿನ ಧ್ವನಿಗಳು" ಎಂದಿರುತ್ತದೆ. ಈ ವರ್ಣನೆಯು ಸಿನಾಯ್ ಪರ್ವತವನ್ನು ಜ್ಞಾಪಿಸುತ್ತದೆ, ಆ ವೇಳೆಯಲ್ಲಿ ದೇವರ ಪ್ರಸನ್ನತೆಯು ಪರ್ವತದಲ್ಲಿ ತೋರ್ಪಡಿಸಲ್ಪಟ್ಟಿತು - ಮತ್ತು ಜನರು ಭಯದಿಂದ ನಡುಗಿದರು. ಸಿನಾಯ್ ಪರ್ವತದೊಂದಿಗೆ ಒಂದು ಸಮಾನಾರ್ಥದ ಉದ್ದೇಶವು ಇಲ್ಲಿರುವದಾದರೆ, ಶಬ್ದಗಳು ಒಂದು ತುತೂರಿಯ ಮಹಾ ಧ್ವನಿಯಂತೆ ಉಂಟಾಗಿದ್ದವು (ನೋಡಿರಿ ವಿಮೋಚನಕಾಂಡ 19:16).

ಯೋಹಾನನು ಮುಂದುವರೆದು ಹೀಗೆ ಹೇಳುತ್ತಾನೆ, **ಅದರ ಮುಂದೆ ದೇವರ ಏಳು ಆತ್ಮಗಳನ್ನು ಸೂಚಿಸುವ ಏಳು ದೀಪಗಳು ಉರಿಯುತ್ತಿದ್ದವು. ಏಳು ಆತ್ಮಗಳು** ಬಹುಶಃ ಪವಿತ್ರಾತ್ಮ ಆಗಿರುತ್ತವೆ (1:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). **ಸಿಂಹಾಸನದ ಮುಂದೆ** ಎಂಬ ಪದಗುಚ್ಛವು ದೈವಿಕ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರುವದಕ್ಕೆ ಆತನು ಸಿದ್ಧವಾಗಿರುವದನ್ನು ಸೂಚಿಸುತ್ತದೆ. **ದೀಪಗಳು** (Lamps) ಎಂಬುದು ಗ್ರೀಕ್ ಭಾಷೆಯ λαμπάς (*lampas*) ಎಂಬುದರ ಲಿಪ್ಯಂತರಣವಾಗಿರುತ್ತದೆ. ಅನೇಕ ಆಧುನಿಕ ತರ್ಜುಮೆಗಳಲ್ಲಿ "ದೀಪಗಳು" ಎಂಬುದರ ಬದಲಾಗಿ "ದೀವಟಿಗೆಗಳು" ಎಂದಿರುತ್ತದೆ (ನೋಡಿರಿ ಯೋಹಾನ 18:3; ಪ್ರಕಟನೆ 8:10). **ಏಳು ದೀಪಗಳು ಉರಿಯುತ್ತಿದ್ದವು** ಎಂಬುದು ಬಹುಶಃ ಪರಿಶುದ್ಧ ಸ್ಥಳದಲ್ಲಿ ಬೆಳಕಿನ ಮೂಲವಾಗಿ ದೇವದರ್ಶನ ಗುಡಾರದಲ್ಲಿದ್ದ ಏಳು ದೀಪಗಳುಳ್ಳ ದೀಪಸ್ತಂಭವನ್ನು ಸೂಚಿಸಬಹುದಾಗಿದೆ (ವಿಮೋಚನಕಾಂಡ 25:31-37; 40:24). ಈ ಅರ್ಥನಿರೂಪಣೆ ಮಾಡುವದಕ್ಕೆ ಮೂರು ಕಾರಣಗಳಿರುತ್ತವೆ: (1) "ಏಳು ಆತ್ಮಗಳು" ವಾಸ್ತವಿಕದಲ್ಲಿ ಒಂದೇ (ಪವಿತ್ರ) ಆತ್ಮವಾಗಿವೆ, ಮತ್ತು ದೇವದರ್ಶನ ಗುಡಾರದಲ್ಲಿದ್ದ ಏಳು ದೀಪಗಳು - ಅದು ಏಳು ದೀಪಗಳನ್ನು ಹೊಂದಿತ್ತಾದರೂ - ಒಂದೇ ಪಿಠೋಪಕರಣವಾಗಿರುತ್ತದೆ. (2) ಪ್ರಕಟನೆ ಪುಸ್ತಕದಲ್ಲಿ ಪರಲೋಕದ ಬಹಳಷ್ಟು ಸಂಕೇತತ್ವವು ದೇವದರ್ಶನ ಗುಡಾರದಿಂದ ತೆಗೆದುಕೊಳ್ಳಲ್ಪಟ್ಟಿದೆ, ಮತ್ತು ಚಿನ್ನದ ದೀಪಸ್ತಂಭದ ಕುರಿತ ಒಂದು ಉಲ್ಲೇಖವು ಆ ಬಳಕೆಯೊಂದಿಗೆ ಸಾಮಂಜಸ್ಯತೆಯನ್ನು ಹೊಂದಿದೆ. (3) ಈ ಅರ್ಥನಿರೂಪಣೆಯು ಏಳು ದೀಪಗಳನ್ನು (ಪವಿತ್ರಾತ್ಮ) 1ನೇ ಅಧ್ಯಾಯದಲ್ಲಿನ ಏಳು ಪ್ರತ್ಯೇಕ ಮತ್ತು ವ್ಯಕ್ತಿಗತ ದೀಪಸ್ತಂಭಗಳಿಗಿಂತ (ಏಳು ಸಭೆಗಳು) ವ್ಯತ್ಯಾಸಗೊಳಿಸುತ್ತದೆ.

ಪವಿತ್ರಾತ್ಮನು ಆತ್ಮೀಕ ಬೆಳಕಿಗೋಸ್ಕರ (ಕೀರ್ತನೆ 119:105) ನಮಗೆ ವಾಕ್ಯವನ್ನು ಅನುಗ್ರಹಿಸಿರುತ್ತಾನೆ (2 ಪೇತ್ರ 1:21). ಪ್ರಕಟನೆ ಪುಸ್ತಕದುದ್ದಕ್ಕೂ, ಪ್ರಕಟನೆಯು ಪವಿತ್ರಾತ್ಮನಿಂದ ಕೊಡಲ್ಪಟ್ಟಿದೆ ಎಂಬುದನ್ನು ಒತ್ತಿ ಹೇಳಲಾಗಿರುತ್ತದೆ (ನೋಡಿರಿ 1:10; 2:7; 4:2; 14:13). ದರ್ಶನದಲ್ಲಿ, ಏಳು ಉರಿಯುವ ದೀಪಗಳು ಸಿಂಹಾಸನದ ವೈಭವವನ್ನು ಮತ್ತಷ್ಟು ಹೆಚ್ಚಿಸಿದ್ದವು.

## ನಾಲ್ಕು ಜೀವಿಗಳು (4:6-11)

**6ಇದಲ್ಲದೆ ಸಿಂಹಾಸನದ ಮುಂದೆ ಸ್ಫಟಿಕಕ್ಕೆ ಸಮಾನವಾದ ಗಾಜಿನ ಸಮುದ್ರವಿದ್ದ ಹಾಗೆ ತೋಚಿತು. ಸಿಂಹಾಸನದ ಮಧ್ಯದಲ್ಲಿ ಅದರ ನಾಲ್ಕು ಕಡೆಗಳಲ್ಲಿ ನಾಲ್ಕು ಜೀವಿಗಳಿದ್ದವು; ಅವುಗಳಿಗೆ ಹಿಂದೆ ಮುಂದೆ ತುಂಬಾ ಕಣ್ಣುಗಳಿದ್ದವು. 7ಮೊದಲನೆ ಜೀವಿಯು ಸಿಂಹದಂತಿತ್ತು; ಎರಡನೆಯ ಜೀವಿಯು ಹೋರಿಯಂತಿತ್ತು; ಮೂರನೆಯ ಜೀವಿಯ ಮುಖವು ಮನುಷ್ಯನ ಮುಖದಂತಿತ್ತು; ನಾಲ್ಕನೆಯ ಜೀವಿಯು ಹಾರುವ ಗರುಡ ಪಕ್ಷಿಯಂತಿತ್ತು. 8ಆ ನಾಲ್ಕು ಜೀವಿಗಳೊಳಗೆ ಒಂದೊಂದಕ್ಕೆ ಆರಾರು ರೆಕ್ಕೆಗಳಿದ್ದವು; ಆ ಜೀವಿಗಳಿಗೆ ಸುತ್ತಲೂ ಒಳಗೂ ತುಂಬಾ ಕಣ್ಣುಗಳಿದ್ದವು. ಆ ಜೀವಿಗಳು ಹಗಲಿರುಳು ವಿಶ್ರಮಿಸಿಕೊಳ್ಳದೆ - ದೇವರಾದ ಕರ್ತನು**

**ಪರಿಶುದ್ಧನು ಪರಿಶುದ್ಧನು ಪರಿಶುದ್ಧನು; ಆತನು ಸರ್ವಶಕ್ತನು, ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರುವಂಥವನು ಎಂದು ಹೇಳುತ್ತವೆ. [9]ಯುಗಯುಗಾಂತರಗಳಲ್ಲಿಯೂ ಜೀವಿಸುವವನಾಗಿ ಸಿಂಹಾಸನದ ಮೇಲೆ ಕೂತಿರುವಾತನಿಗೆ ಆ ನಾಲ್ಕು ಜೀವಿಗಳು ಪ್ರಭಾವಮಾನ ಕೃತಜ್ಞತಾಸ್ತುತಿಗಳನ್ನು ಸಲ್ಲಿಸುವಾಗ್ಗೆ [10]ಆ ಇಪ್ಪತ್ತುನಾಲ್ಕು ಮಂದಿ ಹಿರಿಯರು ಸಿಂಹಾಸನದ ಮೇಲೆ ಕೂತಾತನ ಪಾದಕ್ಕೆ ಬಿದ್ದು ತಮ್ಮ ಕಿರೀಟಗಳನ್ನು ಸಿಂಹಾಸನದ ಮುಂದೆ ಹಾಕಿ - [11]ಕರ್ತನೇ, ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದು ವದಕ್ಕೆ ಯೋಗ್ಯನಾಗಿದ್ದೀ; ಸಮಸ್ತವನ್ನು ಸೃಷ್ಟಿಸಿದಾತನು ನೀನೇ; ಎಲ್ಲವು ನಿನ್ನ ಚಿತ್ತದಿಂದಲೇ ಇದ್ದವು, ನಿನ್ನ ಚಿತ್ತದಿಂದಲೇ ನಿರ್ಮಿತವಾದವು ಎಂದು ಹೇಳುತ್ತಾ ಯುಗಯುಗಾಂತರಗಳಲ್ಲಿಯೂ ಜೀವಿಸುವಾತನನ್ನು ಆರಾಧಿಸುತ್ತಾರೆ.**

**ವಚನ 6. ಇದಲ್ಲದೆ ಸಿಂಹಾಸನದ ಮುಂದೆ ಸ್ಫಟಿಕಕ್ಕೆ ಸಮಾನವಾದ ಗಾಜಿನ ಸಮುದ್ರವಿದ್ದ ಹಾಗೆ ತೋಚಿತು.** ಮೊದಲನೆಯ ಶತಮಾನದಲ್ಲಿ, ಬಹಳಷ್ಟು ಗಾಜು ಕಪ್ಪು ಮತ್ತು ನಿಷ್ಪ್ರಾರದರ್ಶಕವಾಗಿರುತ್ತಿತ್ತು. **ಸ್ಫಟಿಕಕ್ಕೆ ಸಮಾನವಾಗಿ** ಪಾರದರ್ಶಕವಾದ **ಗಾಜು** ವಿರಳ ಹಾಗೂ ಅತ್ಯಂಥ ಬೆಲೆಯುಳ್ಳದ್ದಾಗಿತ್ತು. ಯೋಬನ ಕಾಲದಲ್ಲಿ, ಪಾರದರ್ಶಕ ಗಾಜು ("ಸ್ಫಟಿಕದಂತಿರುವ"; KJV) ಚಿನ್ನದಷ್ಟೇ ಅಮೂಲ್ಯವಾಗಿತ್ತು (ಯೋಬ 28:17).

**ಸಮುದ್ರ**ದ ಚಿತ್ರಣವು ಪ್ರಕಟನೆ ಪುಸ್ತಕದಲ್ಲಿ ಸತತವಾಗಿ ಕಾಣಿಸಿಕೊಳ್ಳುತ್ತದೆ ಪ್ರಕಟನೆ ಪುಸ್ತಕದಲ್ಲಿ ಬಹಳಷ್ಟು ಸಮಯದಲ್ಲಿ, "ಸಮುದ್ರ"ದ ಸಂಕೇತವು ನೀರಿನಿಂದ ಆವರಿಸಲ್ಪಟ್ಟಿರುವ ಭೂಮಿಯ ಒಂದು ಭಾಗದ ಮೇಲೆ ಆಧಾರವಾಗಿರುತ್ತದೆ (5:13; 7:1). ಸಾಂದರ್ಭಿಕವಾಗಿ, ಆ ಪದವು ಪ್ರಕ್ಷುಬ್ಧವಾಗಿರುವ ಮಾನವರ ಸಮೂಹಗಳನ್ನು ಸೂಚಿಸುತ್ತದೆ (17:1, 15). ವ್ಯಾಖ್ಯಾನಕಾರರು ಸಮುದ್ರದ ಕುರಿತ ಉಲ್ಲೇಖಗಳನ್ನು ಒಂದೇ ವಿಧವಾದ ಅರ್ಥನಿರೂಪಣೆಯೊಂದಿಗೆ ಸಂಬಂಧಪಡಿಸುವದಕ್ಕೆ ಕಷ್ಟ ಪಡುತ್ತಾರೆ, ಆದರೆ ಅದು ಮೂರು ಕಾರಣಗಳಿಗಾಗಿ ಅನಾವಶ್ಯಕವಾದದ್ದು: (1) 4ನೇ ಅಧ್ಯಾಯವನ್ನು ಬರೆಯುವದರಲ್ಲಿ, ಯೋಹಾನನು ವಾಸ್ತವದಲ್ಲಿ ಒಂದು ಸಮುದ್ರವನ್ನು ನೋಡುತ್ತಿರಲಿಲ್ಲ, ಆದರೆ ಆತನಿಗೆ ಸಮುದ್ರವನ್ನು ಜ್ಞಾಪಿಸುವಂಥಹ ಯಾವದೋ ಒಂದನ್ನು ("ಸಮುದ್ರವಿದ್ದ ಹಾಗೆ ತೋಚಿತು") ಕಂಡನು. (2) ಈ ಪುಸ್ತಕದಲ್ಲಿ ಸಾಮಂಜಸ್ಯತೆಯನ್ನು ಕಾಪಾಡಿಕೊಂಡು ಹೋಗುವದು ಯಾವಾಗಲೂ ಒಂದು ಪ್ರಮುಖ ಆದ್ಯತೆಯಾಗಿರುವದಿಲ್ಲ. (3) ಯೋಹಾನನಿಂದ ಬಣ್ಣಿಸಲ್ಪಟ್ಟಿರುವ ಪರಲೋಕದ "ಸಮುದ್ರ"ವು ನಿಶ್ಚಯವಾಗಿಯೂ ಜಾರಸ್ತ್ರೀಯು ಕೂತುಕೊಂಡಿರುವಂಥ "ನೀರಗಳು" ಎಂಬುದಕ್ಕಿಂತ ವ್ಯತ್ಯಾಸವಾದದ್ದು. ಈ ನೀರಿನ ವಿಧಗಳು ಬಹುಶಃ ಒಂದು ತದ್ವಿರುದ್ಧ ಹೋಲಿಕೆಯ ಉದ್ದೇಶಕ್ಕಾಗಿದ್ದು ಪ್ರಕಟನೆ ಪುಸ್ತಕದಲ್ಲಿರುವ ಅನೇಕಗಳಲ್ಲಿ ಒಂದಾಗಿರಬಹುದು. 6ನೇ ವಚನದಲ್ಲಿ, "ಸಮುದ್ರ" ಸೂಚಿಸಬಹುದೇನೆಂದರೆ, ನಾವು ದೇಹದಲ್ಲಿರುವ ವೇಳೆ, ದೇವರು ಮತ್ತು ನಮ್ಮ ನಡುವೆ ಯಾವಾಗಲೂ ಒಂದು ಅಡ್ಡಗೋಡೆಯು ಇದ್ದೇ ಇರುವದು – ಗಾಜಿನ ಸಮುದ್ರವು ಯೋಹಾನನನ್ನು ಸಿಂಹಾಸನದಿಂದ ಬೇರ್ಪಡಿಸಿದ್ದ ರೀತಿಯಲ್ಲಿಯೇ. 21:1ರಲ್ಲಿ, ವಿಮೋಚಿಸಲ್ಪಟ್ಟವರು ಕೊನೆಗೂ ಪರಲೋಕದಲ್ಲಿ "ಇನ್ನು ಸಮುದ್ರವೂ ಇಲ್ಲ" ಎಂಬುದೆ. 4:6ರಲ್ಲಿರುವ ಸಮುದ್ರ ಎಂಬುದಕ್ಕೆ ಇನ್ನು ಕೆಲವು ಅರ್ಥನಿರೂಪಣೆಗಳನ್ನು ಸಲಹೆ ಮಾಡಲಾಗಿರುತ್ತದೆ. ಕೆಲವರು ಅದು ಸೊಲೊಮೋನನು ಕಟ್ಟಿಸಿದ ದೇವಾಲಯದ ಮುಂದೆ ಇರುತ್ತಿದ್ದ ಗಂಗಾಳವನ್ನು ಸೂಚಿಸುತ್ತದೆಂದು ಭಾವಿಸುತ್ತಾರೆ, ಅದು "ಸಮುದ್ರ" ಎಂದು ಕರೆಯಲ್ಪಟ್ಟಿತ್ತು (1 ಅರಸು 7:23).

ಯೋಹಾನನು ಕಂಡ ದೃಶ್ಯವು ಒಂದು "ಸಮುದ್ರ" ಎಂದು ಕರೆಯಲ್ಪಡುವ ಮಿನುಗುವ

ಪ್ರದೇಶದಲ್ಲಿ ಪ್ರತಿಫಲನಗೊಳ್ಳುವದನ್ನು ಊಹಿಸಿಕೊಳ್ಳಿರಿ. ಪ್ರಶಾಂತವಾಗಿರುವ ಕೆರೆಗಳು ಭವ್ಯವಾದ ಮರಗಳು, ವೈಭವಯುಕ್ತ ಪರ್ವತಗಳು, ಹಾಗೂ ಮೇಘಗಳಿಂದ ತುಂಬಿರುವ ಆಕಾಶಗಳನ್ನೊಳಗೊಂಡ ಒಂದು ಅಮೋಘವಾದ ಪ್ರತಿಫಲನವನ್ನು ಒದಗಿಸುತ್ತವೆ. ಯೋಹಾನನ ಇಂದ್ರಿಯಗಳನ್ನು ಆವರಿಸಿಕೊಂಡ ಆ ದೃಶ್ಯವು ಇನ್ನೆಷ್ಟು ವಿಸ್ಮೃತಗೊಳಿಸುವಂಥದ್ದು ಆಗಿರಬಹುದು: ಬೇರೆ ಬೇರೆಯವರು ಕೂತುಕೊಂಡಿದ್ದ ಇಪ್ಪತ್ತುನಾಲ್ಕು ಸಿಂಹಾಸನಗಳು; ನಾಲ್ಕು ವಿಲಕ್ಷಣವಾದ ಜೀವಿಗಳು; ಏಳು ಉರಿಯುತ್ತಿರುವ ದೀಪಗಳು; ಕಣ್ಣು ಕೋರೈಸುವ ದೀಪಗಳು, ಭಯಸೂಚಕ ಮೇಘಗಳು, ಮತ್ತು ಹೊಳೆಯುತ್ತಿರುವ ಮಿಂಚುಗಳಿಂದ ಕೂಡಿದ ಭವ್ಯವಾದ ಸಿಂಹಾಸನ- ಎಲ್ಲವೂ ಗಾಜಿನ ಸಮುದ್ರವೊಂದರಲ್ಲಿ ಪ್ರತಿಬಿಂಬಿಸಲ್ಪಟ್ಟಿರುವದು.

ಯೋಹಾನನು ತನ್ನ ದರ್ಶನವನ್ನು ಮುಂದುವರೆಸುತ್ತಾನೆ, **ಸಿಂಹಾಸನದ ಮಧ್ಯದಲ್ಲಿ ಅದರ ನಾಲ್ಕು ಕಡೆಗಳಲ್ಲಿ ನಾಲ್ಕು ಜೀವಿಗಳಿದ್ದವು; ಅವುಗಳ ಹಿಂದೆ ಮುಂದೆ ತುಂಬಾ ಕಣ್ಣುಗಳಿದ್ದವು. ಮಧ್ಯದಲ್ಲಿ** ಎಂದು ಅನುವಾದಿಸಲ್ಪಟ್ಟಿರುವ ἐν μέσῳ (*en mesō*) ಎಂಬುದು ಸಿಂಹಾಸನದ "ನಡುವೆ" ಎಂದು ಸಹ ಅನುವಾದಿಸಲ್ಪಡಬಹುದಾಗಿದೆ. ಈ ಪರಿಭಾಷೆಯು ಬೇರೊಂದು ಕಡೆಯಲ್ಲಿ ಯೇಸುವಿನ ಕುರಿತಾಗಿ ಬಳಸಲ್ಪಟ್ಟಿದೆ (5:6; 7:17). ಇದು ಸಿಂಹಾಸನದೊಂದಿಗಿರುವ ವಿಶಿಷ್ಟವಾದ ಸಂಬಂಧವನ್ನು ಸೂಚಿಸುತ್ತದೆ.

ದರ್ಶನದ ಅತ್ಯಂಥ ಬಲವಾದ ಭಾಗವೆಂದರೆ ಬಹು ರೆಕ್ಕೆಗಳನ್ನು ಮತ್ತು ಕಣ್ಣುಗಳನ್ನು ಹೊಂದಿದ್ದ **ನಾಲ್ಕು ಜೀವಿಗಳು**. KJVಯು ದುರಾದೃಷ್ಟಕರವಾಗಿ "ಮೃಗಗಳು" ಎಂಬ ಅನುವಾದವನ್ನು ಹೊಂದಿದ್ದು, ಅದು ಮೃಗೀಯ ಪೆಡಂಭೂತಗಳು ಎಂಬರ್ಥವನ್ನು ಕೊಡುತ್ತದೆ. ಗ್ರೀಕ್ ವಾಕ್ಯವು "ಮೃಗ" (θηρίον, *thērion*) ಎಂಬ ಪದವನ್ನು ಬಳಸುವದಿಲ್ಲ, ಇದು ಅನಂತರದಲ್ಲಿ 13:1, 11 ವಚನಗಳಲ್ಲಿ ಯೇಸುವಿನ ವೈರಿಗಳನ್ನು ಕುರಿತು ಮಾತಾಡುವಾಗ ಬಳಸಲ್ಪಟ್ಟಿರುವ ಪದವಾಗಿದೆ. ಬದಲಾಗಿ, ಗ್ರೀಕ್ ವಾಕ್ಯವು "ಜೀವಿಸುವ [ಸಂಗತಿಗಳು ಅಥವಾ ಜೀವಿಗಳು]" (ζῷα, *zōa*) ಎಂಬುದನ್ನು ಒಳಗೊಂಡಿರುತ್ತದೆ. "ನಾಲ್ಕು ಜೀವಿಗಳಿಗೆ" (4:6; LB) ಪೂರ್ವಿಕರು ಯೆಶಾಯ 6 ಮತ್ತು ಯೆಹೆಜ್ಕೇಲ 1 ಮತ್ತು 10ರಲ್ಲಿ ದಾಖಲಿಸಲ್ಪಟ್ಟಿರುವ ದರ್ಶನಗಳಲ್ಲಿ ಕಂಡು ಬರುತ್ತಾರೆ. ಪ್ರಕಟನೆ 4ರ ನಾಲ್ಕು ವಿಲಕ್ಷಣ ಜೀವಿಗಳು ಈ ಮುಂಚೆ ಯೆಶಾಯ ಹಾಗೂ ಯೆಹೆಜ್ಕೇಲರು ಕಂಡಿದ್ದ ಜೀವಿಗಳನ್ನೊಳಗೊಂಡ ಗುಂಪಾಗಿರುತ್ತದೆ. ಪ್ರಕಟನೆ 4ರಲ್ಲಿನ ಮೊದಲ ಭಾಗದ ಬಣ್ಣನೆಯು ಯೆಹೆಜ್ಕೇಲನ ದರ್ಶನದೊಂದಿಗೆ ಸಂಬಂಧ ಹೊಂದಿರುತ್ತದೆ: ನಾಲ್ಕು ಜೀವಿಗಳ ಆಕಾರಗಳು ಕಂಡು ಬಂದವು (ಯೆಹೆಜ್ಕೇಲ 1:5), **ತುಂಬಾ ಕಣ್ಣುಗಳು** ಇದ್ದವು ಯೆಹೆಜ್ಕೇಲನ ಜೀವಿಗಳ "ಗಾಲಿಗಳಿಗೆ" ಸಹ "ತುಂಬಾ ಕಣ್ಣುಗಳು" ಇದ್ದವು (ಯೆಹೆಜ್ಕೇಲ 1:16-18).

**ವಚನ 17. ಮೊದಲನೆಯ ಜೀವಿಯು ಸಿಂಹದಂತಿತ್ತು; ಎರಡನೆಯ ಜೀವಿಯು ಹೋರಿಯಂತಿತ್ತು; ಮೂರನೆಯ ಜೀವಿಯ ಮುಖವು ಮನುಷ್ಯರ ಮುಖದಂತಿತ್ತು; ನಾಲ್ಕನೆಯ ಜೀವಿಯು ಹಾರುವ ಗರುಡ ಪಕ್ಷಿಯಂತಿತ್ತು.** ಯೆಹೆಜ್ಕೇಲನ ಪುಸ್ತಕದಲ್ಲಿರುವ ಜೀವಿಗಳಿಗೆ ನಾಲ್ಕು ಮುಖಗಳಿದ್ದರೆ (ಯೆಹೆಜ್ಕೇಲ 1:10), ಪ್ರಕಟನೆ ಪುಸ್ತಕದಲ್ಲಿರುವ ಪ್ರತಿಯೊಂದು ಜೀವಿಯು ಕೇವಲ ಒಂದೇ ಒಂದು ಮುಖವನ್ನು ಹೊಂದಿದ್ದವು; ಆದರೆ ಮುಖಗಳು ಯೆಹೆಜ್ಕೇಲನಿಂದ ಪ್ರಸ್ತಾಪಿಸಲ್ಪಟ್ಟಿರುವ ಅದೇ ಮುಖಗಳೇ ಆಗಿರುತ್ತವೆ: ಒಂದು ಸಿಂಹ, ಒಂದು ಹೋರಿ ಅಥವಾ ಎತ್ತು (RSV; NIV), ಒಬ್ಬ ಮನುಷ್ಯನ, ಹಾಗೂ ಒಂದು ಗರುಡ ಪಕ್ಷಿ. ಪ್ರಕಟನೆ 4ರಲ್ಲಿ ಒಂದೇ ಜೀವಿಯ "ಮುಖ"ವು (ಮನುಷ್ಯನ ಮುಖದಂತಿದ್ದ) ಮಾತ್ರವೇ ಪ್ರಸ್ತಾಪಿಸಲ್ಪಟ್ಟಿದೆ, ಆದರೆ

ಉಳಿದ ಮೂರು ಸಹ ತಾನು ಹೋಲುವ ಪ್ರಾಣಿಯ ಮುಖವನ್ನು ಹೊಂದಿದ್ದನೆಂಬುದು ಸೂಚ್ಯಾರ್ಥವಾಗಿರುತ್ತದೆ. ಅವರ ಮುಖಗಳ ಹೊರತು ಪಡಿಸಿ, ಆ ನಾಲ್ಕು ಜೀವಿಗಳ ಆಕಾರದ ಬಗ್ಗೆ ನಾವು ನಿಖರವಾಗಿ ತಿಳಿಯಲು ಸಾಧ್ಯವಿಲ್ಲ. ಯೆಹೆಜ್ಕೇಲನ ಜೀವಿಗಳು ಒಂದೇ ರೀತಿಯಲ್ಲಿ ಕಾಣಿಸಿದವು (ಯೆಹೆಜ್ಕೇಲ 10:10). ಇದು ಯೋಹಾನನು ಕಂಡ ಜೀವಿಗಳ ವಿಷಯದಲ್ಲಿಯೂ ಸತ್ಯವಾಗಿರಬಹುದು ಅಥವಾ ಆಗಿರದೆಯೂ ಇರಬಹುದು.

ಪ್ರತಿಯೊಂದು ಅಂಶವು ಜೀವಿಗಳು ಎಷ್ಟು ಗಮನಾರ್ಹವಾಗಿದ್ದವೆಂಬುದನ್ನು ಒತ್ತಿ ಹೇಳುತ್ತದೆ: ಅವುಗಳಿಗೆ "ತುಂಬಾ ಕಣ್ಣುಗಳಿದ್ದವು," ಮತ್ತು ಹೀಗೆ ಅವುಗಳನ್ನು ಸರ್ವ-ತಿಳುವಳಿಕೆಯುಳ್ಳವುಗಳಾಗಿದ್ದವು. ಅವುಗಳು ಸಿಂಹದಂತೆ ಧೈರ್ಯಶಾಲಿ, ಹೋರಿಯಂತೆ ಬಲಿಷ್ಠ, ಒಬ್ಬ ಮನುಷ್ಯನಂತೆ ಚಾಣಕ್ಷ್ಯ, ಮತ್ತು ಗರುಡ ಪಕ್ಷಿಯಂತೆ ವೇಗವುಳ್ಳವುಗಳು ಆಗಿದ್ದವು. "ಅನ್ಯೋಕ್ತಿಗೊಳಿಸುವಿಕೆ" ಎಂಬ ಅರ್ಥನಿರೂಪಣೆಯ ವಿಧಾನವು ಕ್ರಮೇಣದಲ್ಲಿ ನಾಲ್ಕು ಜೀವಿಗಳನ್ನು ನಾಲ್ಕು ಸುವಾರ್ತೆಗಳ ಲೇಖಕರನ್ನಾಗಿ ಮಾಡಿತ್ತು. ಇವುಗಳು ಯಾರೆಂದು ಗುರುತಿಸುವ ವಿಷಯದಲ್ಲಿ ವ್ಯತ್ಯಾಸಗಳಿರುತ್ತವೆ, ಆದರೆ Victorinusನು ಮತ್ತಾಯನನ್ನು ಮನುಷ್ಯನೊಂದಿಗೆ, ಮಾರ್ಕನನ್ನು ಸಿಂಹದೊಂದಿಗೆ, ಲೂಕನನ್ನು ಹೋರಿಯೊಂದಿಗೆ (ಎತ್ತು), ಮತ್ತು ಯೋಹಾನನನ್ನು ಗರುಡ ಪಕ್ಷಿಯೊಂದಿಗೆ ಗುರುತಿಸುತ್ತಾನೆ.[3] ವಾಕ್ಯಭಾಗದಲ್ಲಿರುವ ಯಾವದೂ ಈ ರೀತಿಯಾದ ಅರ್ಥನಿರೂಪಣೆಯನ್ನು ಸೂಚಿಸುವದಿಲ್ಲ. ಅನ್ಯೋಕ್ತಿಗೊಳಿಸುವದು ವ್ಯಾಖ್ಯಾನಕಾರನು ಏನು ಯೋಚಿಸುತ್ತಾನೆಂಬುದನ್ನು ಬಯಲುಗೊಳಿಸುತ್ತದೆಯೇ ಹೊರತು ಬೈಬಲ್ ಏನು ಹೇಳುತ್ತದೆಂಬುದನ್ನು ಅಲ್ಲ.

**ವಚನ 8. ಆ ನಾಲ್ಕು ಜೀವಿಗಳೊಳಗೆ ಒಂದೊಂದಕ್ಕೆ ಆರಾರು ರೆಕ್ಕೆಗಳಿದ್ದವು; ಆ ಜೀವಿಗಳಿಗೆ ಸುತ್ತಲೂ ಒಳಗೂ ತುಂಬಾ ಕಣ್ಣುಗಳಿದ್ದವು.** ಪ್ರಕಟನೆ 4ರಲ್ಲಿರುವ ದರ್ಶನದ ಉಳಿದ ಭಾಗವೆಲ್ಲಾ ಯೆಶಾಯನ ದರ್ಶನಕ್ಕೆ ಸಂಬಂಧಪಟ್ಟದ್ದಾಗಿದೆ: ಆ ಜೀವಿಗಳು ಆರು ರೆಕ್ಕೆಗಳನ್ನು ಹೊಂದಿದವುಗಳಾಗಿದ್ದು "ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು" ಎಂದು ಕೂಗುತ್ತಿದ್ದವು (ಯೆಶಾಯ 6:2, 3). ಯೆಶಾಯ 6:2ನೇ ವಚನವು ಆರು ರೆಕ್ಕೆಗಳಿರುವ ಉದ್ದೇಶವನ್ನು ತಿಳಿಸುವದಾಗಿದ್ದು, ಅವುಗಳು ಎರಡೆರಡರಂತೆ ಮೂರು ಜೋಡಿಗಳಿದ್ದವು: ಅವರ ಮುಖವನ್ನು ಮುಚ್ಚಿಕೊಳ್ಳುವದಕ್ಕಾಗಿ ಎರಡು ರೆಕ್ಕೆಗಳು (ದೀನತೆ), ಅವರ ಕಾಲುಗಳನ್ನು ಮುಚ್ಚಿಕೊಳ್ಳಲು ಎರಡು ರೆಕ್ಕೆಗಳು (ಸಭ್ಯತೆ), ಮತ್ತು ಹಾರಾಡುವದಕ್ಕೆ ಎರಡು ರೆಕ್ಕೆಗಳು (ಸೇವೆ).

ಪ್ರಕಟನೆ 4ರಲ್ಲಿದ್ದ ಈ ಅದ್ಭುತವಾದ ಜೀವಿಗಳು ಏನು ಅಥವಾ ಯಾರು ಆಗಿದ್ದವು? ಯೆಶಾಯನ ಪುಸ್ತಕದಲ್ಲಿರುವ ಜೀವಿಗಳು "ಸೆರಾಫಿಯರು" ಎಂದು ಕರೆಯಲ್ಪಟ್ಟವು (ಯೆಶಾಯ 6:2, 6). "ಸೆರಾಫಿಯರು" ಎಂಬುದು שָׂרָף (*sārāph*) ಎಂಬ ಇಬ್ರಿಯ ಪದದ ಲಿಪ್ಯಂತರಣವಾಗಿದ್ದು, ಅದರರ್ಥವು "ಪ್ರಕಾಶಿಸುವವನು" ಅಥವಾ "ಉರಿಯುವವನು" ಎಂದಾಗಿರುತ್ತದೆ. ಅರಣ್ಯದಲ್ಲಿ ಇಸ್ರಾಯೇಲ್ಯರ ಮೇಲೆ ದಾಳಿ ಮಾಡಿದ "ಉರಿ [ಮಂಡಲಗಳು] ಸರ್ಪಗಳು" ಬಣ್ಣಿಸುವದಕ್ಕೆ ಬಳಸಲ್ಪಟ್ಟಿರುವ ಪದದ ಒಂದು ರೂಪವಾಗಿದೆ (ಅರಣ್ಯಕಾಂಡ 21:6, 8). ಯೆಶಾಯ 6ರಲ್ಲಿನ "ಸೆರಾಫಿಯ" ಒಂದು ಸರ್ಪದ ರೂಪವನ್ನು ಹೊಂದಿತ್ತು ಎಂದು ಕೆಲವರು ಯೋಚಿಸುತ್ತಾರೆ, ಆದರೆ ಬಹುಶಃ ಅವುಗಳು ಕೇವಲ "ಹೊಳೆಯುವ" ಗುಣವುಳ್ಳ ಜೀವಿಗಳಷ್ಟೆ ಆಗಿರಬಹುದಾಗಿದೆ. ಯೆಹೆಜ್ಕೇಲನ ಪುಸ್ತಕದಲ್ಲಿರುವ ಜೀವಿಗಳು "ಕೆರೂಬಿಗಳು" ಎಂದು ಕರೆಯಲ್ಪಟ್ಟಿರುತ್ತವೆ (ಯೆಹಜ್ಕೇಲ 10:15, 20). ಕೆರೂಬಿಯರು ಬೈಬಲಿನೊಳಗೆ ಆಗಾಗ ಬೇರೆ ಸ್ಥಳಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತಾರೆ, ಉದಾಹರಣೆಗೆ ಆದಿಕಾಂಡ 3:24 ಮತ್ತು ವಿಮೋಚನಕಾಂಡ 25:18-20, 22. ("Seraphim" ಮತ್ತು "cherubim" ಪದಗಳು "im"

ನಿಂದ ಕೊನೆಗೊಳ್ಳುವದು ಇಬ್ರಿಯ ಭಾಷೆಯ ಬಹುವಚನದ ಮುಕ್ತಾಯಗೊಳ್ಳುವಿಕೆಯನ್ನು ಪ್ರತಿಬಿಂಬಿಸುತ್ತದೆ.) ಸಾಮಾನ್ಯವಾಗಿರುವ ಯೋಚನೆಯು ಏನೆಂದರೆ ಸೆರಾಫಿಯರು ಮತ್ತು ಕೆರೂಬಿಯರು ದೇವರ ಸೃಷ್ಟಿಯಲ್ಲಿಯಲ್ಲಿಯೇ ಅತ್ಯುನ್ನತವಾದವರು, ದೇವದೂತರೊಳಗಿನ ಎರಡು ವಿಶೇಷವಾದ ತರಹದವರು ಆಗಿರುವ ಸಾಧ್ಯತೆಯಿದೆ. "ಪ್ರಧಾನದೂತ" (1 ಥೆಸಲೋನಿಕ 4:16) ಎಂಬ ಪದವು ಕೆಲವು ದೇವದೂತರು ಬೇರೆಯವರಿಗಿಂತ ಉನ್ನತರಾದವರು ಎಂಬುದನ್ನು ಸೂಚಿಸುತ್ತದೆ; "ಪ್ರಧಾನ" ಎಂಬುದು ἀρχή (*archē*) ಎಂಬ ಪದದಿಂದ ಬಂದದ್ದು, ಅದರ ಅರ್ಥವು "ಪ್ರಮುಖನು" ಅಥವಾ "ಅಧಿಕಾರಿ" ಎಂದಾಗಿರುತ್ತದೆ. ಮಿಕಾಯೇಲನು ಒಬ್ಬ ಪ್ರಧಾನದೂತನು ಎಂದು ಕರೆಯಲ್ಪಟ್ಟಿದ್ದಾನೆ (ಯೂದನು 9; ನೋಡಿರಿ ದಾನಿಯೇಲ 12:1). ದೇವದೂತರ ತರಹದ ಕುರಿತು ಹೆಚ್ಚಿನ ಮಾಹಿತಿಯು ಅಷ್ಟಾಗಿ ಇರುವದಿಲ್ಲ. ಬಹುಶಃ ಯೋಹಾನನು ತಿಳಿಸುವ ನಾಲ್ಕು ಜೀವಿಗಳು ಪ್ರಧಾನದೂತರಾಗಿರಬಹುದು - ಅಥವಾ ಅವರು ಸಕಲ ಸೃಷ್ಟಿಗೆ ಸಂಕೇತವಾಗಿರಬಹುದು. "ನಾಲ್ಕು" ಎಂಬುದು ಬ್ರಹ್ಮಾಂಡ ಸಂಖ್ಯೆ, ಸೃಷ್ಟಿಯ ಸಂಖ್ಯೆಯಾಗಿದೆ. ನಮ್ಮ ಸಂಕೀರ್ತನೆಗಳಲ್ಲೊಂದು ಹೇಳುವ ಪ್ರಕಾರ, ಸಕಲ ಸೃಷ್ಟಿಯು "ನಮ್ಮನ್ನು ನಿರ್ಮಿಸಿದ್ದು ದೈವಿಕ ಹಸ್ತವೇ" (ನೋಡಿರಿ ಕೀರ್ತನೆ 19:1; 150:6). ಜೀವಿಗಳು ದೇವರ ಗುಣಸ್ವಭಾವವನ್ನು ಪರಲೋಕಿಕವಾಗಿ ಜ್ಞಾಪಿಸುವವುಗಳಷ್ಟೆ ಆಗಿರಬಹುದಾಗಿದೆ.

ಒಂದು ಗಮನಾರ್ಹವಾದ ಆರಾಧನೆಯೊಂದಿಗೆ ಕ್ರಿಯೆಯು ಆರಂಭಗೊಳ್ಳುತ್ತದೆ. ನಾಲ್ಕು ಜೀವಿಗಳನ್ನು ಬಣ್ಣಿಸಿದ ಬಳಿಕ, ಯೋಹಾನನು ಹೀಗೆ ಹೇಳುತ್ತಾನೆ, ಆ ಜೀವಿಗಳು ಹಗಲಿರುಳು ವಿಶ್ರಮಿಸಿಕೊಳ್ಳದೆ - ದೇವರಾದ ಕರ್ತನು ಪರಿಶುದ್ಧನು ಪರಿಶುದ್ಧನು ಪರಿಶುದ್ಧನು; ಆತನು ಸರ್ವಶಕ್ತನು, ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರುವಂಥವನು ಎಂದು ಹೇಳುತ್ತವೆ. ಈ ಜೀವಿಗಳು ಮೊದಲು ದೇವರ *ಶುದ್ಧತೆಗಾಗಿ* ಆತನನ್ನು ಸ್ತುತಿಸಿದವು. ಪರಿಶುದ್ಧನು ಎಂಬ ಪದವನ್ನು ಮೂರು ಸಾರಿ ಪುನರಾವರ್ತಿಸುವದು ಗರಿಷ್ಠ ಮಟ್ಟವನ್ನು ವ್ಯಕ್ತಪಡಿಸುವ ಇಬ್ರಿಯ ರೀತಿಯಾಗಿರುತ್ತದೆ: ದೇವರು ಅತಿ ಪರಿಶುದ್ಧನು; ಅತ್ಯಂಥ ಪರಿಶುದ್ಧ. ಬಳಿಕ ಅವುಗಳು ಆತನ *ಶಕ್ತಿ*ಯನ್ನು ಒಪ್ಪಿಕೊಳ್ಳುತ್ತವೆ: ಆತನು ದೇವರಾದ ಕರ್ತನು, ಸರ್ವಶಕ್ತನು. Domitianನು ಈ ಬಿರುದನ್ನು ತನಗೆ ಇಟ್ಟುಕೊಂಡಿದ್ದನು, ಆದರೆ ಅದು ದೇವರಿಗೆ ಮಾತ್ರವೇ ಸೇರಿದ್ದಾಗಿತ್ತು. ಅಂತಿಮವಾಗಿ, ಈ ಆಕರ್ಷಕವಾದ ನಾಲ್ಕು ಜೀವಿಗಳ ತಂಡವು (5:8, 9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ) ದೇವರ *ಶಾಶ್ವತತೆಯ* ಕುರಿತು ಹಾಡುತ್ತದೆ: ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರು ವಂಥವನು (1:4, 8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಲೋಕವು ಹೆಚ್ಚುಕಡಿಮೆಯಾಗುತ್ತಲಿರುತ್ತದೆ, ಆದರೆ ದೇವರು ಏಕರೀತಿಯಲ್ಲಿಯೇ ಇರುತ್ತಾನೆ.

**ವಚನ 9. ಯುಗಯುಗಾಂತರಗಳಲ್ಲಿಯೂ ಜೀವಿಸುವವನಾಗಿ ಸಿಂಹಾಸನದ ಮೇಲೆ ಕೂತಿರುವಾತನಿಗೆ ಆ ನಾಲ್ಕು ಜೀವಿಗಳು ಪ್ರಭಾವಮಾನ ಕೃತಜ್ಞತೆಗಳನ್ನು** ಸಲ್ಲಿಸಿದವು. ಅವುಗಳು ಏನು ಮಾಡಿದವು ಎಂಬುದು ಪ್ರಾಮುಖ್ಯವೇ ಹೊರತು ಅವುಗಳು ಏನು ಅಥವಾ ಯಾರು ಎಂಬುದಲ್ಲ. ಅವುಗಳು ಅಷ್ಟೊಂದು ಪ್ರಭಾವಶಾಲಿಯಾಗಿ ಕಂಡಾಗ್ಯೂ, ತಮಗಾಗಿ ಸ್ತುತಿಯನ್ನು ಮಾಡಿಕೊಳ್ಳಲಿಲ್ಲ, ಆದರೆ ಬದಲಾಗಿ ಸಕಲ ಮಹಿಮೆಯನ್ನು ತಂದೆಗೆ ಕೊಡುತ್ತವೆ: "ದೇವರಾದ ಕರ್ತನು ಪರಿಶುದ್ಧನು ಪರಿಶುದ್ಧನು ಪರಿಶುದ್ಧನು, ಆತನು ಸರ್ವಶಕ್ತನು."

**ವಚನ 10.** ಆರಾಧನೆಯು ಸಾಂಕ್ರಾಮಿಕವಾಗಿರುತ್ತದೆ. ಜೀವಿಗಳು ದೇವರಿಗೆ ಮಹಿಮೆಯನ್ನು ಸಲ್ಲಿಸುತ್ತಿರುವಂತೆಯೇ, ಇಪ್ಪತ್ತುನಾಲ್ಕು ಹಿರಿಯರು ಸಹ ಹಾಗೆಯೇ ಮಾಡಿದರು. ಅವರು **ಸಿಂಹಾಸನದ ಮೇಲೆ ಕೂತಾತನ ಪಾದಕ್ಕೆ ಬಿದ್ದು ತಮ್ಮ ಕಿರೀಟಗಳನ್ನು**

**ಸಿಂಹಾಸನದ ಮುಂದೆ ಹಾಕಿ**, ಆತನಿಂದಲೇ ಸಕಲ ಒಳ್ಳೇ ಕಾರ್ಯಗಳು ಬಂದವು ಎಂಬುದನ್ನು ಒಪ್ಪಿಕೊಳ್ಳುತ್ತಾರೆ (ಯಾಕೋಬ 1:17). ಸಿಂಹಾಸನದ ಮುಂದೆ ತಮ್ಮ ಕಿರೀಟಗಳನ್ನು ಹಾಕುವದು (ಅಥವಾ ಇಡುವದು) ಅವರಿಗೆ ತಮ್ಮ ಕಿರೀಟಗಳ (ಆತ್ಮೀಕ ಜಯ) ಬಗ್ಗೆ ಬೆಲೆಯಿರಲಿಲ್ಲ ಎಂದರ್ಥವೇನಲ್ಲ, ಆದರೆ ಜಯವನ್ನು ಸಾಧ್ಯವಾಗಿಸಿದವನು ದೇವರೇ ಎಂಬುದನ್ನು ಒಪ್ಪಿಕೊಳ್ಳುವಿಕೆಯಾಗಿರುತ್ತದೆ. ಆ ದಿನಗಳಲ್ಲಿ, ಒಬ್ಬ ಅರಸನನ್ನು ಜಯಿಸಿಕೊಂಡಾಗ, ಆತನಿಗೆ ತನ್ನ ಕಿರೀಟವನ್ನು ಗೆದ್ದಿರುವನ ಮುಂದೆ ಹಾಕುವಂತೆ ಒತ್ತಾಯಿಸಲಾಗುತ್ತಿತ್ತು. ಪರಾಭವಗೊಂಡ ಅರಸರು ಹಾಗೆ ಮಾಡುವಂತೆ ಒತ್ತಾಯಿಸಲ್ಪಡುತ್ತಿದ್ದರು, ಆದರೆ ಜಯಶಾಲಿ ಹಿರಿಯರೋ ಅದನ್ನು ಮನಃಪೂರ್ವಕವಾಗಿ ಮಾಡಿದರು.

**ವಚನ 11.** ಹಿರಿಯರು ಪಲ್ಲವಿಯನ್ನು ಎತ್ತಿಕೊಳ್ಳುತ್ತಾರೆ: **ಕರ್ತನೇ, ನಮ್ಮ ದೇವರೇ, ನೀನು ಮಾನ ಪ್ರಭಾವ ಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ.** ಮೂಲವಾಕ್ಯದಲ್ಲಿ, **ಮಾನ**, **ಪ್ರಭಾವ**, **ಬಲ**ಗಳೆಂಬ ಪ್ರತಿಯೊಂದು ಪದದ ಮುಂದೆ ನಿರ್ದೋಷ್ಟ ಗುಣವಾಚಿ ("the") ಇರುತ್ತದೆ - ಆ ರೀತಿಯ ಸ್ತುತಿ ಮಾತುಗಳಿಗೆ ದೇವರೊಬ್ಬನೇ ಯೋಗ್ಯನೆಂಬುದನ್ನು ಸೂಚಿಸುವದಾಗಿರುತ್ತದೆ. ಬಳಿಕ, ಇಪ್ಪತ್ತುನಾಲ್ಕು ಹಿರಿಯರು ಆತನನ್ನು ಸೃಷ್ಟಿಕರ್ತನೆಂದು ಆರಾಧಿಸುತ್ತಾರೆ: **ಕರ್ತನೇ, ನಮ್ಮ ದೇವರೇ . . . ನೀವು ಯೋಗ್ಯನು; ಎಲ್ಲವು ನಿನ್ನ ಚಿತ್ತದಿಂದ ಇದ್ದವು, ನಿನ್ನ ಚಿತ್ತದಿಂದಲೇ ನಿರ್ಮಿತವಾದವು.**

4ನೇ ಅಧ್ಯಾಯದಲ್ಲಿರುವ ದರ್ಶನದಲ್ಲಿ ಮುಖ್ಯ ಗಮನವನ್ನು ಹೊಂದಿರುವ ಸಂಗತಿಯೆಂದರೆ ಸಿಂಹಾಸನ. ಪ್ರಕಟನೆ ಪುಸ್ತಕದಲ್ಲಿರುವ "ಸಿಂಹಾಸನ" ಎಂದು ಬಳಸಲ್ಪಟ್ಟಿರುವ ನಾಲ್ವತ್ತು ಪದಗಳೊಳಗೆ ಈ ಅಧ್ಯಾಯವು ಹದಿನಾಲ್ಕು ಪದಗಳನ್ನೊಳಗೊಂಡಿರುತ್ತದೆ. ಮಿಕ್ಕ ಎಲ್ಲವೂ ಸಿಂಹಾಸನಕ್ಕೆ ಸಂಬಂಧಪಟ್ಟದ್ದಾಗಿ ಕಾಣಲ್ಪಡುತ್ತದೆ: ಇಪ್ಪತ್ತುನಾಲ್ಕು ಹಿರಿಯರು "ಸಿಂಹಾಸನದ *ಸುತ್ತಲು*" ಕೂತಿದ್ದರು (ವ. 4); "ಸಿಂಹಾಸನದೊ*ಳಗಿಂದ*" ಮಿಂಚುಗಳೂ ಗುಡುಗುಗಳೂ ಹೊರಡುತ್ತಿದ್ದವು (ವ. 5); "ಸಿಂಹಾಸನದ *ಮುಂದೆ*" ಏಳು ಆತ್ಮಗಳು ಮತ್ತು ಸ್ಫಟಿಕಕ್ಕೆ ಸಮಾನವಾದ ಗಾಜಿನ ಸಮುದ್ರ ಇದ್ದವು (ವಚನಗಳು 5, 6); "ಸಿಂಹಾಸನದ *ಮಧ್ಯದಲ್ಲಿ ಅದರ ನಾಲ್ಕು ಕಡೆಗಳಲ್ಲಿ*" ನಾಲ್ಕು ಜೀವಿಗಳಿದ್ದವು (ವ. 6); ಎಲ್ಲಾ ಆರಾಧನೆಯು ಸಿಂಹಾಸನದ *ಕಡೆಗೆ* ಮುಖ ಮಾಡಿದ್ದಾಗಿತ್ತು (ವಚನಗಳು 9, 10) (ಒತ್ತಿ ಹೇಳಿದ್ದು ನನ್ನದು).

## ಅನ್ವಯಿಸುವಿಕೆ

### ಸೃಷ್ಟಿಕರ್ತನು ಮತ್ತು ವಿಮೋಚನಕನಾಗಿ ದೇವರು (ಅಧ್ಯಾಯಗಳು 4; 5)

4 ಮತ್ತು 5 ಅಧ್ಯಾಯಗಳನ್ನು ಎರಡು ಅಂಶಗಳನ್ನೊಳಗೊಂಡ ಒಂದೇ ಪಾಠವಾಗಿ ಅಧ್ಯಯನ ಮಾಡಬಹುದಾಗಿದೆ: 4ನೇ ಅಧ್ಯಾಯವು ದೇವರನ್ನು ಸೃಷ್ಟಿಕರ್ತನೆಂದು ಹೇಳುತ್ತದೆ, ಮತ್ತು 5ನೇ ಅಧ್ಯಾಯವು ದೇವರನ್ನು ವಿಮೋಚಕನೆಂಬದಾಗಿ ಹೇಳುತ್ತದೆ. 4:11 ಮತ್ತು 5:9, 10ರಲ್ಲಿ ಸಿಕ್ಕುವ ಹಾಡುಗಳಿಗೆ ವಿಶೇಷವಾದ ಒತ್ತು ಕೊಡಬಹುದಾಗಿದೆ. 4:11ನೇ ವಚನವು ಹಳೆಯ ಸೃಷ್ಟಿಯ ಸುತ್ತ ಕೇಂದ್ರಿಕೃತವಾಗಿದ್ದರೆ, 5:9, 10 ವಚನಗಳು ನೂತನ ಸೃಷ್ಟಿಯ ಸುತ್ತ ಕೇಂದ್ರಕೃತವಾಗಿರುತ್ತವೆ. 4:11ರಲ್ಲಿನ ಹಾಡು ಕರ್ತನಿಂದ ಸೃಷ್ಟಿಸಲ್ಪಟ್ಟಿರುವ ಶಾರೀರಿಕ ಜೀವಿತವನ್ನು ಕೊಂಡಾಡುತ್ತದೆ, ಆದರೆ 5:9, 10ರಲ್ಲಿ ಹಾಡು ಆತ್ಮೀಕ ಜೀವಿತವನ್ನು ಕೊಂಡಾಡುತ್ತದೆ.

ಎರಡು ಅಧ್ಯಾಯಗಳಲ್ಲಿ ಕೊಡಲಾಗಿರುವ ಒತ್ತಿಗೆ ಹೆಸರನ್ನಿಡುವದಕ್ಕೆ ಕೆಲವು ರೀತಿಗಳು ಇಲ್ಲಿವೆ: (1) ದೇವರ ವೈಭವ ಮತ್ತು (2) ವಿಮೋಚನೆಯ ಮರ್ಮ; ಅಥವಾ (1) ಆಳುತ್ತಿರುವ ಕರ್ತನು ಮತ್ತು (2) ವಿಮೋಚಿಸುವ ಕುರಿಯಾದಾತನು. Jim McGuigganನು ಅಭಿಪ್ರಾಯ ಪಟ್ಟದ್ದೇನೆಂದರೆ ಯೋಹಾನ 14:1ರಲ್ಲಿನ ಯೇಸುವು ನುಡಿದ ಮಾತುಗಳು ಒಂದು ರೀತಿಯಲ್ಲಿ ಈ ಎರಡು ಅಧ್ಯಾಯಗಳ ಸಂಕ್ಷಿಪ್ತ ವಿವರಣೆಯಾಗಿರುತ್ತವೆ: "ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ [ಎರಡೂ ಅಧ್ಯಾಯಗಳ ಮುಖ್ಯ ಚರ್ಚೆಯಾಂಶ]; ದೇವರನ್ನು ನಂಬಿರಿ [ಅಧ್ಯಾಯ 4], ನನ್ನನ್ನೂ ನಂಬಿರಿ [ಅಧ್ಯಾಯ 5]."[4] Jim Bill McInteerನು ಯೇಸುವಿನ ಕುರಿತಾದ ಒಂದು ಕಥನಕ್ಕೆ 4 ಮತ್ತು 5 ಅಧ್ಯಾಯಗಳನ್ನು ತಳಹದಿಯಾಗಿ ಬಳಸುತ್ತಾನೆ.[5]

ಪ್ರಕಟನೆ ಪುಸ್ತಕವು ಮಹಾನ್ ಹಾಡುಗಳಿಂದ ತುಂಬಿರುತ್ತದೆ, ಅವುಗಳಲ್ಲಿ ಅನೇಕ ಹಾಡುಗಳು ನಮ್ಮ ಸಂಕೀರ್ತನೆ ಪುಸ್ತಕಗಳಲ್ಲಿನ ಹಾಡುಗಳಲ್ಲಿ ಪ್ರತಿಫಲನಗೊಂಡಿರುತ್ತವೆ. ನೀವು ಅಧ್ಯಯನ ಮಾಡುತ್ತಿರುವ ವಾಕ್ಯಕ್ಕೆ ಸಂಬಂಧ ಪಡುವಂತಹ ಹಾಡೊಂದನ್ನು ಸಭೆಯು ಹಾಡುವದು ಸೂಕ್ತವಾಗಿರುತ್ತದೆ.

## ದೇವರ ಸಿಂಹಾಸನದ ಕೋಣೆ (ಅಧ್ಯಾಯ 4)

4ನೇ ಅಧ್ಯಯನ ಮಾಡಬಹುದಾದ ಒಂದು ದಾರಿಯೆಂದರೆ ಸಿಂಹಾನದ ಮೇಲೆ ಮುಖ್ಯವಾದ ಗಮನವನ್ನು ಕೊಡುವದು. ಪಾಠವನ್ನು "ದೇವರ ಸಿಂಹಾಸನ ಕೋಣೆ" ಎಂದು ಕರೆಯಬಹುದು, ಮತ್ತು ಪ್ರಮುಖ ಅಂಶಗಳು "ಸಿಂಹಾಸನ" ಎಂಬ ಪದವನ್ನು ಬಳಸಬಹುದು: (1) ಸಿಂಹಾಸನದ ಮೇಲೆ: ಘನಗಾಂಭೀರ್ಯತೆ (ವಚನಗಳು 1-3); (2) ಸಿಂಹಾಸನದ ಸುತ್ತಲು: ಕೃಪಾವಂತಿಕೆ (ವಚನಗಳು 4, 10); (3) ಸಿಂಹಾಸನದೊಳಗಿಂದ: ಆಡಳಿತ (ವ. 5); (4) ಸಿಂಹಾಸನದ ಮುಂದೆ: ಮಾರ್ಗದರ್ಶನ (ವಚನಗಳು 5, 6); (5) ಸಿಂಹಾಸನದ ಮಧ್ಯದಲ್ಲಿ: ಶ್ರೇಷ್ಠತೆ (ವಚನಗಳು 6-8); (6) ಸಿಂಹಾಸನಕ್ಕೆ: ಕೃತಜ್ಞತಾಭಾವನೆ (ವಚನಗಳು 8-11). Merrill C. Tenneyನು ಈ ಅಧ್ಯಾಯವನ್ನು "ನಿತ್ಯವಾದ ಸಿಂಹಾಸನ" ಎಂದು ಕರೆದನು, ಅದರಲ್ಲಿ ಮೂರು ಪ್ರಮುಖ ಅಂಶಗಳನ್ನು ಪಟ್ಟಿ ಮಾಡುತ್ತಾನೆ: (1) ಸಿಂಹಾಸನದಲ್ಲಿ ಆಸೀನನಾಗಿರುವಾತನು, (2) ಸಿಂಹಾಸನದ ಸ್ಥಳ, (3) ಸಿಂಹಾಸನದ ಆರಾಧನೆ.[6]

## ನಿಮ್ಮ ಕಣ್ಣುಗಳನ್ನು ಪರಲೋಕದ ಕಡೆಗೆ ಎತ್ತಿರಿ (ಅಧ್ಯಾಯ 4)

ಯೋಹಾನನು ಈ ಲೋಕದ ಮೇಲಿನ ತನ್ನ ದೃಷ್ಟಿಯನ್ನು ತೆಗೆದು ಪರಲೋಕದ ಕಡೆಗೆ ತಿರುಗಿಸಿಕೊಳ್ಳುತ್ತಾನೆ. ಆತನು ನಿರ್ಜನವಾಗಿದ್ದ ಪತ್ಮೋಸ್ ದ್ವೀಪದಲ್ಲಿನ ತನ್ನ ಸೆರೆವಾಸವನ್ನು ದಾಟಿ ದೇವರ ಸಿಂಹಾಸನದ ಕೋಣೆಯ ವೈಭವನ್ನು ನೋಡುವಂತೆ ಪವಿತ್ರಾತ್ಮನಿಂದ ಶಕ್ತಗೊಳಿಸಲ್ಪಟ್ಟಿದ್ದನು. ಯೋಹಾನನು ತನ್ನ ಶಾರೀರಿಕ ಪರಿಸರಗಳನ್ನು ದಾಟಿ ನೋಡಿದ ರೀತಿಯಲ್ಲಿಯೇ, ನಾವು ಸಹ ಪರಲೋಕದ ಕಡೆಗೆ ನಮ್ಮ ಕಣ್ಣುಗಳನ್ನೆತ್ತುವ ಅಗತ್ಯವಿದೆ. ಈ ತತ್ವವನ್ನು ದೃಷ್ಟಾಂತ ಪಡಿಸಬೇಕೆಂದರೆ, ಅಂಚೆಯಲ್ಲೊಂದು ಹರಿದು ಹೋಗಿರುವ ಪೆಟ್ಟಿಗೆ ಬರುತ್ತದೆಂದು ಊಹಿಸಿಕೊಳ್ಳಿರಿ. ಕಾಗದವು ಹರಿದು ಹೋಗಿದೆ ಮತ್ತು ಹೊಲಸಾಗಿರುತ್ತದೆ. ಆ ಪೊಟ್ಟಣವನ್ನು ನೋಡಿದರೆ ಅದರಲ್ಲಿ ಯಾವದೇ ಯೋಗ್ಯವಾದದ್ದು ಇರುವದಕ್ಕೆ ಸಾಧ್ಯವಿಲ್ಲ ಮತ್ತು ಎಸೆದು ಬಿಡತಕ್ಕದ್ದೇ ಎಂಬಂತೆ ತೋರಬಹುದು - ಆದರೆ ಅದನ್ನು ತೆರೆದು ನೋಡಿದಾಗ, ಅದರಲ್ಲೊಂದು ನಿಕ್ಷೇಪವು ಬಯಲುಗೊಳ್ಳುತ್ತದೆ. ನಮ್ಮ ದೃಷ್ಟಿಯು ಲೋಕದ ಮೇಲಿರುವಾಗ, ನಾವು ಜೀವಿತದ ಕೇವಲ ಹರಿದು ಹೋಗಿರುವ ಪೊಟ್ಟಣದ ಹೊದಿಕೆಗಳನ್ನು ಮಾತ್ರವೇ ಕಾಣುತ್ತೇವೆ. ನಮ್ಮ ದೃಷ್ಟಿಯು ಪರಲೋಕದ ಕಡೆಗೆ ತಿರುಗಿಕೊಳ್ಳುವಾಗ, ನಾವು

ಒಟ್ಟಾರೆ ಜೀವಿತವು ಏನಾಗಿರುತ್ತದೆ ಎಂಬುದನ್ನು ಮತ್ತು ಪರಲೋಕದ ನಿಕ್ಷೇಪವು ನಮ್ಮದಾಗಬಲ್ಲದು ಎಂಬುದನ್ನು ಕಾಣುವೆವು. ನೀವು ಒಂದು ಪೊಟ್ಟಣವನ್ನು ಕಟ್ಟಿ ಅದನ್ನು ಒಂದು ದೃಷ್ಟಾಂತ ಪಾಠವಾಗಿ ಬಳಸಿಕೊಳ್ಳಬಹುದು.

## ದೇವರು ವಿಶ್ವದ ಮೇಲೆ ನಿಯಂತ್ರಣವನ್ನು ಹೊಂದಿರುತ್ತಾನೆ (ಅಧ್ಯಾಯ 4)

Burton Coffmanನು ಹೀಗೆ ಬರೆಯುತ್ತಾನೆ, "ಯಾವನೇ ಆಗಲಿ ವಿಶ್ವದ ಕುರಿತು ತಿಳಿದುಕೊಳ್ಳಬಹುದಾದ ಅತ್ಯಂಥ ಪ್ರಾಮುಖ್ಯವಾದ ಸಂಗತಿಯೆಂದರೆ ಅದಕ್ಕೊಂದು ನಿಯಂತ್ರಣ ಕೇಂದ್ರ ಇರುತ್ತದೆ ಎಂಬುದೆ."[7] ಭೂಮಿಯ ಮೇಲೆ ಎಷ್ಟೇ ಗೊಂದಲವಿದ್ದರೂ ಸರಿಯೇ, ದೇವರು ನಮ್ಮನ್ನು ಕೈ ಬಿಟ್ಟು ಬಿಟ್ಟಿರುವದಿಲ್ಲ. ಪ್ರಕಟನೆ 4ನೇ ಅಧ್ಯಾಯದ ಸಂದೇಶವು ಏನೆಂದರೆ ದೇವರು ತನ್ನ ಸಿಂಹಾಸನವನ್ನು ತ್ಯಜಿಸಿರುವದಿಲ್ಲ ಎಂಬುದೆ.

ನಾವು ದೇವರ ಸಿಂಹಾಸನದ ಕೋಣೆಯೊಳಗೆ ನೋಡುತ್ತಿರುವ ವೇಳೆ, ನಮಗೆ ಜೀವಿತದ ಕ್ಲೀಷ್ಟಕರವಾದ ಸಮಸ್ಯೆಗಳಿಗೆಲ್ಲಾ ಉತ್ತರಗಳು ಕೊಡಲ್ಪಡುತ್ತವೋ? ಇಲ್ಲ, ಆದರೆ ನಮಗೆ ಅತ್ಯಂಥ ಪ್ರಾಮುಖ್ಯವಾದ ಉತ್ತರವು ಕೊಡಲ್ಪಡುತ್ತದೆ: ಏನು ನಡೆಯುತ್ತಿದೆ ಮತ್ತು ಏಕೆ ನಡೆಯುತ್ತಿದೆ ಎಂಬುದು ನಮಗೆ ಅರ್ಥವಾದರೂ ಸರಿಯೇ ಅಥವಾ ಇಲ್ಲದಿದ್ದರೂ ಸರಿಯೇ, ದೇವರು ಈಗಲೂ ಅಧಿಕಾರದಲ್ಲಿದ್ದಾನೆ ಮತ್ತು ಎಲ್ಲವೂ ಉತ್ತಮವಾಗಿ ಮಾರ್ಪಡುವಂತೆ ಮಾಡುವನು ಎಂಬ ಭರವಸವನ್ನು ನಾವು ಇಟ್ಟುಕೊಳ್ಳಬಹುದಾಗಿದೆ. ಅದು ನಮಗೆ ಆತನು ಕೊಡುವ ಖಾತ್ರಿಯಾಗಿರುತ್ತದೆ.

## ನಮ್ಮ ಜೀವಿತಗಳಲ್ಲಿ ದೇವರು ಕೇಂದ್ರಭಾಗವಾಗಿರುತ್ತಾನೆ (ಅಧ್ಯಾಯ 4)

J. W. Robertsನು ಹೀಗೆ ಹೇಳಿದನು, "[ಪ್ರಕಟನೆ] ಪುಸ್ತಕದ ಕೇಂದ್ರಿಯ ಸಿದ್ಧಾಂತ, ಇಡೀ ಕ್ರೈಸ್ತೀಯ ನಂಬಿಕೆಯ ಕೇಂದ್ರಿಯ ಭಾಗವು ಸಹ ಆಗಿದ್ದು" ಅದು ಯಾವದೆಂದರೆ "ನಿತ್ಯನಾದ ದೇವರು, ಪರಲೋಕದಲ್ಲಿ ಸಿಂಹಾಸನರೂಢನಾಗಿದ್ದು ಆತನೇ ವಿಶ್ವದ ಶಕ್ತಿಯ ಕೇಂದ್ರವಾಗಿದ್ದಾನೆ"[8] ಎಂಬುದೆ. Domitianನಿಗೆ ಸಿಂಹಾಸನದ ಮೇಲೆ ಕೂತುಕೊಳ್ಳಲು ದೇವರ ಬೆಂಬಲದ ಮೂಲಕವಾಗಿ ಅನುಮತಿಸಲಾಗಿತ್ತು - ತಾತ್ಕಾಲಿಕವಾಗಿ - ಆದರೆ ಆತನನ್ನು ಯಾವ ಕ್ಷಣದಲ್ಲಾದರೂ ಕಿತ್ತು ಹಾಕುವದಕ್ಕೆ ಸಾಧ್ಯವಿತ್ತು. ದೇವರ ಸಿಂಹಾಸನವು ಬೇರೆ ಎಲ್ಲಾ ಸಿಂಹಾಸನಕ್ಕೂ ಮೀಗಿಲಾದದ್ದು.

ನಾವು ಈ ದಿನ ಈ ಭಾವನೆಯನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಲೋಕದಲ್ಲಿ ಸ್ವಲ್ಪ ಜನರು ರೋಮ್ ನಗರವನ್ನು ತಮ್ಮ ಪ್ರಮುಖ ದೃಷ್ಟಿಕೇಂದ್ರವಾಗಿ ಹೊಂದಿದ್ದಾರೆ, ಆದರೆ ಅನೇಕರು ತಮ್ಮ ಜೀವಿತಗಳಲ್ಲಿ ಮುಖ್ಯ ಗಮನವನ್ನು ಅಷ್ಟೇ ಅಯೋಗ್ಯವಾದ ಬಯಕೆಗಳ ಮೇಲೆ ಇಟ್ಟಿರುತ್ತಾರೆ: ಸಮೃದ್ಧಿ, ಪ್ರತಿಷ್ಠೆ, ಅಧಿಕಾರ, ಮತ್ತು ಜನಪ್ರಿಯತೆ. ಇನ್ನು ಕೆಲವರ ಕಣ್ಣುಗಳಲ್ಲಿ ಕೇವಲ ಈ ಜೀವಿತದಲ್ಲಾಗಿರುವ ಅನ್ಯಾಯಗಳು ಮತ್ತು ದುರಂತಗಳೇ ತುಂಬಿಕೊಂಡಿದ್ದು ಅವರಿಗೆ ಬೇರೆ ಇನ್ನಾವದೂ ಅಷ್ಟಾಗಿ ನೋಡುವದಕ್ಕಾಗುವದಿಲ್ಲ. ಕೆಲವರು ಜೀವಿತವನ್ನು "ಒಬ್ಬ ಮೂರ್ಖನಿಂದ ಹೇಳಲ್ಪಟ್ಟಿರುವ ಕಥೆಯಾಗಿದ್ದು, ಕೇವಲ ಗದ್ದಲ ಮತ್ತು ಅಬ್ಬರದಿಂದ ಕೂಡಿದ್ದು, ಯಾವ ಮಹತ್ವವನ್ನೂ ಹೊಂದಿರುವಂಥದ್ದಲ್ಲ"[9] ಎಂಬಂತೆ ಕಾಣುತ್ತಾರೆ. ಒಂದು ಜೀವಿತದ ಕೇಂದ್ರ ಸ್ಥಾನದಲ್ಲಿ ದೇವರ ಸಿಂಹಾಸನವು ಇರುವ ಹೊರತು ಜೀವಿತಕ್ಕೆ ಯಾವ ಅರ್ಥವೂ ಇರುವದಿಲ್ಲ.

ಕೀರ್ತನೆಗಾರನು ಹೀಗೆ ಹೇಳಿದನು, "ಯೆಹೋವನೇ ರಾಜ್ಯಾಧಿಕಾರವನ್ನು ವಹಿಸಿದ್ದಾನೆ; ಮಹಿಮಾವಸ್ತ್ರವನ್ನು ಧರಿಸಿದ್ದಾನೆ, ಧರಿಸಿದ್ದಾನೆ. ಶೌರ್ಯವನ್ನು ನಡುಕಟ್ಟಾಗಿ ಬಿಗಿದಿದ್ದಾನೆ"

(ಕೀರ್ತನೆ 93:1). ಸವಾಲುಗಳಲ್ಲೊಂದು ಎಂದರೆ ದೇವರ ಸಿಂಹಾಸನವನ್ನು *ವಿಶ್ವದ* ಕೇಂದ್ರವಾಗಿ ಕಾಣುವದು - ಮತ್ತು ಅತನ ಸಿಂಹಾಸನವನ್ನು ನಿಮ್ಮ *ಜೀವಿತದ* ಕೇಂದ್ರವಾಗಿ ಮಾಡಿಕೊಳ್ಳುವದು. ನೀವು ಅದನ್ನು ಮಾಡುವದಾದರೆ, ನಿಮ್ಮ ದೃಷ್ಟಿಕೋನವು ನಿಶ್ಚಯವಾಗಿಯೂ ಮಾರ್ಪಡುವದು.

## ದೇವರು ತನ್ನ ಸಿಂಹಾಸನದ ಮೇಲಿದ್ದಾನೆ (ಅಧ್ಯಾಯ 4)

ಇಂದು ದೃಷ್ಟಿಕೋನದ ಅಗತ್ಯವಿರುತ್ತದೆ. ಪ್ರಥಮ ಶತಮಾನದಲ್ಲಿ ಕ್ರೈಸ್ತರು ಹಿಂಸಿಸಲ್ಪಡುತ್ತಿದ್ದ ಹಾಗೆಯೇ, ಇಂದು ಕ್ರೈಸ್ತರಲ್ಲಿ ಕೆಲವರು ಹಿಂಸೆಯನ್ನು ಅನುಭವಿಸುತ್ತಿರುತ್ತಾರೆ. ಇನ್ನು ಕೆಲವರು ದೈನಂದಿನ ಜೀವಿತದ ಸಮಸ್ಯೆಗಳಿಂದ ಕಳವಳಗೊಳ್ಳುತ್ತಾರೆ. ಮತ್ತಷ್ಟು ಕೆಲವರು "ಈ ಜೀವಮಾನದಲ್ಲಿ ಆಗುವ ಐಶ್ವರ್ಯ ಭೋಗಗಳಿಂದ ಅಡಗಿಸಲ್ಪಟ್ಟಿರುತ್ತಾರೆ" (ಲೂಕ 8:14). ಕಾಲದಿಂದ ಕಾಲಕ್ಕೆ, ಪ್ರತಿಯೊಬ್ಬರು ಒಟ್ಟಾರೆ ಜೀವನ ಎಂದರೆ ಏನೆಂಬುದನ್ನು ಕಂಡುಕೊಳ್ಳುವಂತಾಗುವದಕ್ಕೆ ದೇವರ ಸಿಂಹಾಸನದ ಕೋಣೆಗೆ ಹಿಂದಿರುಗತಕ್ಕದ್ದು.

ನಿಮ್ಮಲ್ಲಿ ಅನೇಕರಿಗೆ ಕೇಡೆಣಿಸುವ ಶಕ್ತಿಗಳಿಂದ ಸುತ್ತುವರೆಯಲ್ಪಟ್ಟವರಾಗಿ ಈ ಕ್ರೈಸ್ತ ಜೀವಿತವನ್ನು ಜೀವಿಸುವದರಲ್ಲಿರುವ ಕಷ್ಟವು ಏನೆಂಬುದು ತಿಳಿದಿರುತ್ತದೆ. ಕೆಲವರಿಗಾದರೋ, ಆ ಶಕ್ತಿಯು ವೈಷಮ್ಯ ಹೊಂದಿರುವ ಸರ್ಕಾರ ಆಗಿರುತ್ತದೆ. ಇನ್ನು ಕೆಲವರಿಗಾದರೋ, ಅದೊಂದು ದಾಕ್ಷಿಣ್ಯವೇ ಇಲ್ಲದ ಧಣಿಯಾಗಿರುವದು, ವಿಶ್ವಾಸವಿಲ್ಲದ ಕುಟುಂಬ, ಸಹಕಾರವನ್ನು ಕೊಡದ ಸಹಪಾಠಿ, ಸ್ನೇಹಮಯವಲ್ಲದ ನೆರೆಯವರು, ಅಥವಾ ಬೆಂಬಲವನ್ನು ನೀಡದ ಸ್ನೇಹಿತರು ಆಗಿರುವರು. ನಮ್ಮ ಬಾಹುಗಳು ಜೋಲು ಬೀಳುವಾಗ ಮತ್ತು ನಮ್ಮ ಹೆಜ್ಜೆಗಳು ಜಾರುವಾಗ (ಗಲಾತ್ಯ 6:9; 2 ಥೆಸಲೋನಿಕ 3:13), ನಾವು ನಮ್ಮ ತಲೆಗಳನ್ನು ಮೇಲಕ್ಕೆತ್ತಬೇಕು ಮತ್ತು ಮತ್ತೊಂದಾವರ್ತಿ ದೇವರ ಮಹಿಮೆಯನ್ನು ನೋಡಬೇಕು, ಆತನು ನಮಗೋಸ್ಕರ ಚಿಂತಿಸುವ ಸರ್ವಶಕ್ತಿಯುಳ್ಳ ಹಾಗೂ ಪ್ರೀತಿಸ್ವರೂಪಿಯಾದ ದೇವರಾಗಿದ್ದಾನೆ (ರೋಮಾ 8:35-39). ಈ ಲೋಕದಲ್ಲಿ ಬೇರೆ ಎಲ್ಲವೂ - ವಿಶ್ವದಲ್ಲಿರುವ ಮಿಕ್ಕ ಎಲ್ಲವೂ -- ನಮ್ಮ ದೇವರನ್ನು ಬಿಟ್ಟರೆ ಮಂಕಾಗಿ ಹೋಗುತ್ತವೆ. ಆ ಸತ್ಯದಿಂದ ಸಾಂತ್ವನವನ್ನು ಮತ್ತು ಬಲವನ್ನು ಹೊಂದಿಕೊಳ್ಳೋಣ.

## ದೇವರನ್ನು ಆರಾಧಿಸಿರಿ (4:8-11)

8ರಿಂದ 11 ವಚನಗಳಲ್ಲಿ, ನಾಲ್ಕು ಜೀವಿಗಳ ಬಳಿಕ ಇಪ್ಪತ್ತುನಾಲ್ಕು ಹಿರಿಯರು ದೇವರನ್ನು ಘನ ಪಡಿಸಿದರು. ಈ ಅದ್ಭುತವಾದ ಜೀವಿಗಳು ಪರಲೋಕದಲ್ಲಿ ದೇವರನ್ನು ಆರಾಧಿಸುತ್ತವೆ, ಆದರೆ ಭೂಮಿಯ ಮೇಲಿರುವ ಅನೇಕರು ಆರಾಧಿಸುವದಕ್ಕೆ ನಿರಾಕರಿಸುತ್ತಾರೆಂಬುದು ಆಶ್ಚರ್ಯವುಂಟು ಮಾಡುತ್ತದಲ್ಲವೇ? ಜನರು ಟೆನ್ನಿಸ್ ಆಟಗಾರರಿಂದ ಮೊದಲ್ಗೊಂಡು ಟುಥ್ ಪೇಸ್ಟ್ ತನಕ ಎಲ್ಲವನ್ನೂ ಸ್ತುತಿಸುತ್ತಾರೆ ಆದರೆ ದೇವರನ್ನು ಸ್ತುತಿಸುವದಕ್ಕೆ ವ್ಯಾಪಕವಾಗಿ ನಿರಾಕರಿಸುತ್ತಾರೆಂಬುದು ಹೃದಯಕ್ಕೆ ವೇದನೆಯುಂಟು ಮಾಡುವಂಥದ್ದಲ್ಲವೋ?

ನಾವು "ಆತ್ಮದಲ್ಲಿಯೂ ಸತ್ಯದಲ್ಲಿಯೂ" (ಯೋಹಾನ 4:24) ಆರಾಧಿಸುವವರಾಗಬೇಕಾದರೆ, ನಾವು ದೇವರನ್ನು ಸ್ತುತಿಸುವದನ್ನು ಕಲಿತುಕೊಳ್ಳತಕ್ಕದ್ದು, ಯಾಕೆಂದರೆ ಆರಾಧನೆಯ ಹೃದಯವೇ ಸ್ತುತಿಯಾಗಿರುತ್ತದೆ. "ಆರಾಧನೆ" ಎಂಬ ಪದವು "ಯೋಗ್ಯತೆಯನ್ನು ಎಣಿಸು" ಎಂದರ್ಥವನ್ನು ಕೊಡುವಂಥ ಹಳೆಯ ಆಂಗ್ಲ ಪದದಿಂದ ಬಂದಿರುತ್ತದೆ. ಆರಾಧನೆಯ ತಿರುಳು ಎಂದರೆ ದೇವರ ಯೋಗ್ಯತೆಯನ್ನು ಗುರುತಿಸುವದು

ಮತ್ತು ಅದನ್ನು ಘೋಷಿಸುವದೇ ಆಗಿದೆ ಕೀರ್ತನೆಗಾರನು ಈ ನಿಬಂಧನೆಯನ್ನು ಕೊಡುತ್ತಾನೆ:

ಭೂಜನಾಂಗಗಳೇ, ಬಲಪ್ರಭಾವಗಳು ಯೆಹೋವ
ನವೇ ಯೆಹೋವನವೇ ಎಂದು ಹೇಳಿ
ಆತನನ್ನು ಘನಪಡಿಸಿರಿ.
ಯೆಹೋವನ ನಾಮಕ್ಕೆ ಯೋಗ್ಯವಾದ ಘನವನ್ನು ಸಲ್ಲಿಸಿರಿ;
ಕಾಣಿಕೆಯೊಡನೆ ಆತನ ಅಂಗಳಗಳಿಗೆ ಬನ್ನಿರಿ.
ಪರಿಶುದ್ಧತ್ವವೆಂಬ ಭೂಷಣದೊಡನೆ ಯೆಹೋ
ವನಿಗೆ ನಮಸ್ಕರಿಸಿರಿ;
ಎಲ್ಲಾ ಭೂನಿವಾಸಿಗಳೇ, ಆತನ ಮುಂದೆ ನಡುಗಿರಿ (ಕೀರ್ತನೆ 96:7-9).

ನಾವು ಆತನನ್ನು ಈ ವಿಧವಾಗಿ ಸ್ತುತಿಸುವಾಗ, ಕನಿಷ್ಠ ನಾಲ್ಕು ಆಶೀರ್ವಾದಗಳು ನಮ್ಮದಾಗುವವು: ನಾವು ದೇವರ ಕಡೆಗೆ ಒಂದು ನವೀಕರಿಸಲ್ಪಟ್ಟ ಭಯಭಕ್ತಿಯನ್ನು ಹೊಂದುವೆವು, ಆತನ ಪ್ರಸನ್ನತೆಯ ಒಂದು ಆಳವಾದ ಅರ್ಥ, ಆತನ ಅಗತ್ಯತೆಯು ನಮಗಿರುತ್ತದೆಂಬ ಕುರಿತು ಒಂದು ಹೆಚ್ಚಾದ ಜಾಗೃತಿ, ಮತ್ತು ನಮ್ಮ ಜೊತೆಯ ಆರಾಧಕರೊಂದಿಗೆ ಒಂದು ಹೆಚ್ಚು ಆಪ್ತವಾದ ಸಂಬಂಧವನ್ನು ಹೊಂದುವೆವು.

## ಪ್ರಶ್ನೆಗಳಲ್ಲಿಯೇ ಅತ್ಯಂಥ ದೊಡ್ಡ ಪ್ರಶ್ನೆ (4:11)

ಬೈಬಲಿನ *ಮೊದಲಲ್ಲಿ*, ನಾವು "ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟು ಮಾಡಿದನು" ಎಂಬ ಮಾತುಗಳನ್ನು ನೋಡುತ್ತೇವೆ (ಆದಿಕಾಂಡ 1:1). ಬೈಬಲಿನ *ಮಧ್ಯಭಾಗ*ದಲ್ಲಿ, ನಾವು "ಆತನು ಅಪ್ಪಣೆಕೊಡಲು ಅವು ಉಂಟಾದವು" ಎಂದು ಓದುತ್ತೇವೆ (ಕೀರ್ತನೆ 148:5). ಬೈಬಲಿನ ಕಡೇ ಭಾಗದಲ್ಲಿ, ". . . ಎಲ್ಲವೂ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವೂ ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟಿತು" ಎಂಬುದು ಪುನಃ ದೃಢೀಕರಿಸಲ್ಪಡುತ್ತದೆ (ಕೊಲೊಸ್ಸೆ 1:16; ನೋಡಿರಿ ಅಪೊಸ್ತಲರ ಕೃತ್ಯಗಳು 17:24; ಇಬ್ರಿಯ 11:3). "ಮನುಷ್ಯನು ಅನೇಕ ವಿಧವಾದ ಶಕ್ತಿಗಳನ್ನು ಸಂಪಾದಿಸಿಕೊಂಡಿದ್ದಾನೆ, ಆದರೆ ಆತನು ಸೃಷ್ಟಿಸುವ ಶಕ್ತಿಯನ್ನು ಹೊಂದಿರುವದಿಲ್ಲ. ಆತನು ಬದಲಾವಣೆಗಳನ್ನು ಮತ್ತು ಮರುಹೊಂದಿಸಿಕೊಳ್ಳಬಲ್ಲನು; ಆತನು ಈಗಾಗಲೇ ಅಸ್ತಿತ್ವದಲ್ಲಿರುವ ವಸ್ತುಗಳಿಂದ ಸಂಗತಿಗಳನ್ನು ನಿರ್ಮಿಸಬಲ್ಲನು; ಆದರೆ ಶೂನ್ಯದಿಂದ ಏನನ್ನಾದರೂ ಸೃಷ್ಟಿ ಮಾಡುವದಕ್ಕೆ ದೇವರೊಬ್ಬನೇ ಶಕ್ತನಾಗಿದ್ದಾನೆ."[10]

ಪ್ರಕಟನೆ 4:11ನೇ ವಚನವು ದೇವರನ್ನು ಸೃಷ್ಟಿಕರ್ತನೆಂದು ಸ್ತುತಿಸುತ್ತದೆ: "ಸಮಸ್ತವನ್ನು ಸೃಷ್ಟಿಸಿದಾತನು ನೀನೇ; ಎಲ್ಲವು ನಿನ್ನ ಚಿತ್ತದಿಂದಲೇ ಇದ್ದವು, ನಿನ್ನ ಚಿತ್ತದಿಂದಲೇ ನಿರ್ಮಿತವಾದವು." ಈ ವಚನವು ಎಂದೆಂದಿಗೂ ವಿಮರ್ಶಿಸಲ್ಪಡುವ ಮೂರು ಅತ್ಯಂಥ ದೊಡ್ಡ ಪ್ರಶ್ನೆಗಳನ್ನು ನೆನಪಿಗೆ ತರುತ್ತದೆ: "ನಾನು ಎಲ್ಲಿಂದ ಬಂದಿರುತ್ತೇನೆ?"; ನಾನು ಏಕೆ ಇಲ್ಲಿ ಇರುತ್ತೇನೆ?"; "ನಾನು ಎಲ್ಲಿಗೆ ಹೋಗುತ್ತಿರುವೆನು?" ನಮ್ಮ ವಾಕ್ಯಭಾಗವು ಇವುಗಳಲ್ಲಿ ಎರಡು ಪ್ರಶ್ನೆಗಳಿಗೆ ನೇರವಾಗಿಯೂ ಮೂರನೆಯ ಪ್ರಶ್ನೆಗೆ ಪರೋಕ್ಷವಾಗಿಯೂ ಉತ್ತರಿಸುತ್ತದೆ.

*"ನಾನು ಎಲ್ಲಿಂದ ಬಂದಿರುತ್ತೇನೆ?"* ನಾನು ದೇವರಿಂದ ಬಂದಿರುತ್ತೇನೆ: "ಸಮಸ್ತವನ್ನು ಸೃಷ್ಟಿಸಿದಾತನು ನೀನೇ." ನಾನು ಹಾಗೆ ಸುಮ್ಮನೆ ಆಕಸ್ಮಿಕವಾಗಿ ಉತ್ಪತ್ತಿಯಾದವನು ಅಥವಾ ಯಾವದೋ ಕಲ್ಪನಾತ್ಮಕವಾದ ವಿಕಾಸದ ಪ್ರಕ್ರಿಯೆಯ ಫಲಿತವಾಗಿ ಹುಟ್ಟಿರುವಾತನು

ಅಲ್ಲ. ಬದಲಾಗಿ, ನಾನು ದೇವರ ವಿಶೇಷವಾದ ಸೃಷ್ಟಿಯಾಗಿದ್ದೇನೆ. ನಾನು ಆತನ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟಿದ್ದೇನೆ - ಮತ್ತು ನೀವು ಸಹ ಹಾಗೆಯೇ ಉಂಟು ಮಾಡಲ್ಪಟ್ಟಿರುವಿರಿ. ಆತನು "ತಾನೇ ಎಲ್ಲರಿಗೂ ಜೀವ ಶ್ವಾಸ ಮುಂತಾದದ್ದೆಲ್ಲವನ್ನೂ ಕೊಡುವವನಾಗಿದ್ದಾನೆ" (ಅಪೊಸ್ತಲರ ಕೃತ್ಯಗಳು 17:25).

*"ನಾನು ಏಕೆ ಇಲ್ಲಿ ಇರುತ್ತೇನೆ?"* ನಾನು ಇಲ್ಲಿ ದೇವರ ಚಿತ್ತದ ಫಲಿತವಾಗಿ ಇದ್ದೇನೆ: "ಎಲ್ಲವು ನಿನ್ನ ಚಿತ್ತದಿಂದಲೇ ಇದ್ದವು." ಈ ವಿಚಾರವು ಸತ್ಯವಾದದ್ದಾದ್ದರಿಂದ, ಜೀವನದಲ್ಲಿ ನನಗಿರುವ ಉದ್ದೇಶವು ಆತನ ಚಿತ್ತವನ್ನು ನೆರವೇರಿಸುವದೇ ಆಗಿರುತ್ತದೆ. ಒಂದು ಹಾಯಾಗಿರುವ ಜೀವನವನ್ನು ಬೆನ್ನತ್ತಿ ಹೋಗುವದಕ್ಕಾಗಿ, ನನ್ನ ದಿನಗಳನ್ನು ನಲಿದಾಟಗಳಿಂದ ತುಂಬಿಸಿಕೊಳ್ಳುವದಕ್ಕಾಗಿ, ಅಥವಾ ಲೋಕವು ವ್ಯಾಖ್ಯಾನಿಸುವ ರೀತಿಯಲ್ಲಿನ ಯಶಸ್ಸನ್ನು ಗಳಿಸುವದಕ್ಕಾಗಲಿ ಸಹ ನನ್ನನ್ನು ಈ ಭೂಮಿಯ ಮೇಲೆ ಇಡಲಾಗಿರುವದಿಲ್ಲ. KJVಯಲ್ಲಿರುವ ಪರಿಭಾಷೆಯನ್ನು ಬಳಸಿ ಹೇಳುವದಾದರೆ, ನಾವು *ಆತನ* "ಇಚ್ಛೆ" ಆಗಿದ್ದೇವೆ (ವ. 11).

*"ನಾನು ಎಲ್ಲಿಗೆ ಹೋಗುತ್ತಿರುವೆನು?"* ಒಂದು ದಿನ ನಾನು ನನ್ನನ್ನು ಉಂಟು ಮಾಡಿರುವ ದೇವರ ಮುಂದೆ ನಿಲ್ಲುವೆನು, ಮತ್ತು ಭೂಮಿಯ ಮೇಲೆ ನನಗಿದ್ದ ಉದ್ದೇಶವನ್ನು ನಾನು ಹೇಗೆ ನೆರವೇರಿಸಿದ್ದೇನೆಂಬುದರ ಕುರಿತು ಲೆಕ್ಕವನ್ನು ಕೊಡುವೆನು (ನೋಡಿರಿ 20:11–15). "ಹೀಗಿರಲಾಗಿ ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರಕೊಡಬೇಕು" (ರೋಮಾ 14:12); "ಹೀಗಿರಲು ಮನೆವಾರ್ತೆಯವನು ನಂಬಿಗಸ್ತನಾಗಿ ಕಂಡುಬರುವದು ಅವಶ್ಯವಲ್ಲವೇ" (1 ಕೊರಿಂಥ 4:2). ನಾವು ಹೆಚ್ಚು ಭಯ ಗೌರವ ಹುಟ್ಟಿಸುವ ಸತ್ಯಗಳನ್ನು ಪರಿಭಾವಿಸಿಕೊಳ್ಳುವದಕ್ಕೆ ಎಂದಿಗೂ ಸಾಧ್ಯವಿಲ್ಲ.

---

**ಅಡಿಟಿಪ್ಪಣಿಗಳು**

[1]Leon Morris, *Revelation*, rev. ed., The Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1987), 85. [2]Bruce M. Metzger, *Breaking the Code: Understanding the Book of Revelation* (Nashville: Abingdon Press, 1993), 48. [3]Victorinus *Commentary on the Apocalypse* 4.7–10. [4]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 78. [5]Jim Bill McInteer, "The Vision Into Heaven," *Sermons of Jim Bill McInteer*, ed. J. D. Thomas, Great Preachers of Today, vol. 10 (Abilene, Tex.: Biblical Research Press, 1966), 169–74. [6]Merrill C. Tenney, *The Book of Revelation*, Proclaiming the New Testament (Grand Rapids, Mich.: Baker Book House, 1963), 22–24. [7]Burton Coffman, *Commentary on Revelation* (Austin, Tex.: Firm Foundation Publishing House, 1979), 100. [8]J. W. Roberts, *The Revelation to John (The Apocalypse)*, The Living Word Commentary, ed. Everett Ferguson (Austin, Tex.: Sweet Publishing Co., 1974), 57. [9]Shakespeare *Macbeth* 5.1.17. [10]William Barclay, *The Revelation of John*, vol. 1, rev. ed., The Daily Study Bible Series (Philadelphia: Westminster Press, 1976), 164.